ಶ್ರೀ ಸದಾಶಿವಪ್ಪ ಪಾಟೀರ್ (ದೇವದುರ್ಗ).—ಸ್ವಾಮಿ, ನಾನು ಒಂದು ಕಾರ್ ಅಜೆನ್‌ಷನ್ ಮೋಷನ್ ಕಳುಹಿಸಿದ್ದೆ. ರಾಯಚೂರು ಡಿಸ್ಟ್ರಿಕ್ಟ್‌ನಲ್ಲಿ 1 ಲಕ್ಷ ಎಕರೆಗೆ ನೀವು ಕೊಟ್ಟಂಥ ಹೈಬ್ರಿಡ್ ಸೀಡ್ಸ್ ಬತ್ತನೆ ಆಗಿದೆ. ಈಗ ಅದಕ್ಕೆಲ್ಲಾ ಸ್ಪ್ರೇ ಮಾಡಬೇಕಾಗುತ್ತದೆ. ಇಲ್ಲದೇ ಹೋದರೆ ಆ ಕ್ರಾಪ್ ಎಲ್ಲಾ ಫೈಲ್ಯೂರ್ ಆಗುತ್ತದೆ. ಅದುದರಿಂದ ದಯವಿಟ್ಟು ನಾನು ಕೊಟ್ಟಿರತಕ್ಕ ಕಾರ್ ಅಜೆನ್‌ಷನ್ ನೋಟಿಸನ್ನು ಸೋಮವಾರ ತೆಗೆದುಕೊಂಡು ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ನೋಡೋಣ.

ಶ್ರೀ ಕೆ. ಪಿ. ನಾಡಗೌಡ (ಮುಧೋಳ್).—ಸ್ವಾಮಿ, ಕರ್ನಾಟಕ ಯೂನಿವರ್ಸಿಟಿಗೆ ಶ್ರೀಮಾನ್ ಪಾಟೀರ್ ಪುಟ್ಟಪ್ಪನವರನ್ನು ನಾಮಕರಣ ಮಾಡಿದ ಬಗ್ಗೆ ನನ್ನ ಒಂದು ಪ್ರಶ್ನೆಯನ್ನು ಹೆಲ್ಡ್ ಓವರ್ ಮಾಡಿದ್ದಾರೆ. ಅದು ಸೋಮವಾರ ಬರುವುದಕ್ಕೆ ಸಾಧ್ಯವಾಗುತ್ತದೆಯೇ?

ಉಪಾಧ್ಯಕ್ಷರು.—ಹೆಲ್ಡ್ ಓವರ್ ಪ್ರಶ್ನೆಯನ್ನು ಸೋಮವಾರ ತೆಗೆದುಕೊಳ್ಳೋಣ.

Papers laid on the Table

Sri M. RAJASEKHARA MURTHY (Minister for Industries, Information and Publicity).—Sir, I beg to lay on the Table of the House :

"A copy of the Government of India Scheme for financing craftsmen and qualified entrepreneurs in pursuance of his promise given on 21-1-1970 in reply to Starred question No. 42 by Sri N. A. Channe Gowda during Seventh Session."

Mr. DEPUTY SPEAKAR.—The Paper is laid.

Report of the Committee on Government Assurances

Sri A. R. PANCHAGAVI.—Sir, I beg to present :

"The Fourth Report of the Committee on Government Assurances."

Mr. DEPUTY SPEAKER.—Report is presented.

Report of the Mysore Public Service Commission

Sri H. SIDDAVEERAPPA.—Sir, I beg to move :

"That the Report of the Mysore public Service Commission for the year 1966-67 laid on the Table of the House on 12th October, 1970 be taken into consideration."

Mr. DEPUTY SPEAKER.—Motion moved :

"That the Report of the Mysore Public Service Commission for the year 1966-67 laid on the Table of the House on 12th October, 1970 be taken into consideraion."

Sri H. SIDDAVEERAPPA (Harihar).—Sir, I do not want to take much time because I would like to give opportunity to other friends who would like to participate in discussion on this important subject.

(SRI H. SIDDAVEERAPPA)

First of all, the Mysore Public Service Commission is a statutory commission. But unfortunately this Government has treated this commission as though it is a department of the Government and they have not bestowed much attention on the working of this statutory commission. As we all know when the Constitution came into being, purposely and designedly the public Service Commission was given recognition as a statutory body.

Sri D. DEVARAJ URS.—Sir, this is an important matter and the concerned Minister is not present.

Sri H. SIDDAVEERAPPA.—Sir, I want to know who is the concerned Minister ? Who is listening to my speech ?

Sri M. RAJASEKHARA MURTHY.—I am listening.

Sri H. SIDDAVEERAPPA.—Sir, the concerned Minister is not present, So I will wait till he comes.

Mr. DEPUTY SPEAKER.—Hon. Minister will come in a couple of minutes. I have sent words to him. The hon. Member may continue his speech.

Sri H. SIDDAVEERAPPA.—No Sir, I will wait till he comes.

ಪಬ್ಲಿಕ್ ಸರ್ವಿಸ್ ಕಮಿಷನ್ ರಿಪೋರ್ಟ್ ಇದೇ ಸಾರಿ ಪ್ರಥಮತಃ ಚರ್ಚೆಗೆ ಬಂದಿರುವುದು. ಅನೇಕ ಗಮನಾರ್ಹವಾದ ಅಂಶಗಳನ್ನು ಸಂಬಂಧಪಟ್ಟ ಇರುಬೆಯು ಮಂತ್ರಿಗಳ ಗಮನಕ್ಕೆ ತರಬೇಕಾಗಿದೆ. ಅವರಿಗೆ ಇಷ್ಟವಿಲ್ಲದೆ ಇದ್ದರೆ, ಅದನ್ನು ಕೇಳತಕ್ಕದ್ದು ಬೇಕಿಲ್ಲದೆ ಇದ್ದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ನಮಗೆ ಬಹಳ ಕಷ್ಟ ಬಂದಿದೆ. ಇದನ್ನು ಹೇಳಬೇಕು. ಹೇಳದೆ ಇದ್ದರೆ ದೇಶದ ದೃಷ್ಟಿಯಿಂದ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ಆದರೆ ಇಲ್ಲಿ ಯಾರಿದ್ದಾರೆ ಕೇಳುವುದಕ್ಕೆ ? 'ಮೂರ್ಖಂಗೆ ನೂರ್ಕಾಲ ಬುದ್ಧಿಹೇಳಿದರೆ, ಗೋರ್ಕಲ್ಲ ಮೇಲೆ ಮಳೆ ಗರೆದರೆ ಅದು ನೀರ ಕುಡಿಯಬಲ್ಲುದೇ ನರ್ವಜ್ಞ' ಎಂದು ಹೇಳುವಂತಾಗಿದೆ. ಮಾನ್ಯ ದೇವರಾಜ ಅರಸ್ ಅವರು ಹೇಳಿದ ಮಾತನ್ನು ನೋಡಿದರೆ ಪದೇ ಪದೇ ಚರ್ಚಿತವರ್ಣವಾಗಿ ಲೋಕಲ್ ಕ್ಯಾಂಡಿಡೇಟ್ಸ್ ವಿಚಾರ ಬರತಕ್ಕ ಪರಿಸ್ಥಿತಿಯನ್ನು ನೋಡಿದರೆ ಇವರ ದೃಷ್ಟಿಯಲ್ಲಿ, ಇವರ ಅಭಿಪ್ರಾಯದಲ್ಲಿ ಯಾವ ಲಾನೂನು ಇಲ್ಲ, ಇವರಿಗೆ ಯಾವ ರೂಲ್ಸ್ ಇಲ್ಲ, ಯಾವ ಕಾನ್‌ಸ್ಟಿಟ್ಯೂಷನ್ ಇಲ್ಲ, ಕಾನ್‌ಸ್ಟಿಟ್ಯೂಷನ್ ಏನ್ನತಕ್ಕುದು ಇವರಿಗೆ ಬೇಕಾಗಿಲ್ಲ. ಇಲ್ಲದೆ ಇದ್ದರೆ ಇಷ್ಟೊಂದು ಅನ್ಯಾಯಗಳನ್ನು ಮಾಡುತ್ತಿರಲಿಲ್ಲ. ಈ ದೇಶದಲ್ಲಿ ಪರಂಪರೆಯಾಗಿ, ನಾವು ರಾಜ್ಯಾಂಗವಿಲ್ಲದೆ ಇರುವುದಕ್ಕಿಂತ ಮುಂಚಿತವಾಗಿ ಹಹ, ಪಬ್ಲಿಕ್ ಸರ್ವಿಸ್ ಕಮಿಷನ್ ಇಲ್ಲದೆ ಇರುವುದಕ್ಕೆ ಮುಂಚಿತವಾಗಿ ಪಬ್ಲಿಕ್ ಸರ್ವಿಸ್ ಕಮಿಷನರ್ ಎಂಬ ಅಧಿಕಾರಿ ಇದ್ದಕಾಲದಲ್ಲಿ ಸಹ ಇಷ್ಟು ಅನ್ಯಾಯ ನಮ್ಮ ದೇಶದಲ್ಲಿ ಆಗುತ್ತಿರಲಿಲ್ಲ. ಆದುದರಿಂದ ನಾನಾದರೂ ಹೇಳುತ್ತೇನೆ, ಸಂಬಂಧಪಟ್ಟ ಮಂತ್ರಿಗಳನ್ನು ತಾವು ಕರೆಸಿದರೆ ಕೆಲವೇ ವಿಷಯಗಳನ್ನು ಬಹಳ ಕಾಲ ತೆಗೆದುಕೊಳ್ಳದೆ ಸ್ವಲ್ಪ ಕಾಲದಲ್ಲಿ ಹೇಳಬೇಕಾದ ವಿಷಯಗಳನ್ನು ಅವರ ಮುಂದೆ ಹೇಳಲು ಭಯಪಡುತ್ತೇನೆ. ಹೇಳಬೇಕಾದ ಅವಶ್ಯಕತೆ ಇಲ್ಲವೆಂದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ಬಹಳ ಮುಖ್ಯವಾದುದು ಎನ್ನುವಂಥದ್ದನ್ನು ಹೇಳುತ್ತೇನೆ.

ಸಂಬಂಧಪಟ್ಟ ಮಂತ್ರಿಗಳು ಬಂದ ಮೇಲೆ ನಾನು ಅವರ ಎದುರಿಗೆ ವಿಷಯಗಳನ್ನು ಹೇಳಬೇಕಾಗಿರುವುದರಿಂದ ಅವರು ಬರುವುದು ನಿಧಾನವಾಗುವುದಾದರೆ ಸ್ವಲ್ಪಕಾಲ ನಿಧೆಯನ್ನು ಮುಂದಕ್ಕೆ ಹಾಕಿ.

Mr. DEPUTY SPEAKER.—The House will now adjourn for twenty minutes.

The House adjourned at Fifteen Minutes past Four of the Clock and reassembled at Forty-five Minutes past Four of the Clock.

[MR. SPEAKER in the Chair.]

ಶ್ರೀ ಎಚ್. ಸಿದ್ದವೀರಪ್ಪ.—ಸನ್ಮಾನ್ಯ ಅಧ್ಯಕ್ಷರೇ, 1966-67ನೇ ಸಾಲಿನ ಮೈಸೂರು ಪಬ್ಲಿಕ್ ಸರ್ವಿಸ್ ಕಮಿಷನ್‌ನಿನ ವಾರ್ಷಿಕ ವರದಿ ವಿಚಾರದಲ್ಲಿ ಈ ಸಭೆಯ ಗಮನಕ್ಕೆ ಒಂದೆರಡು ಅಂಶಗಳನ್ನು ತರಲಿಕ್ಕೆ ಇಚ್ಛೆಪಡುತ್ತೇನೆ. ಬಹುಶ: ಈ ಸಭೆಯ ಮುಂದೆ ಹಿಂದೆ ಯಾವಾಗಲಾದರೂ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ವರದಿ ಚರ್ಚೆಗೆ ಬಂದಿತ್ತೋ ಇಲ್ಲವೋ, ನನಗೆ ಗೊತ್ತಿಲ್ಲ. ಆದರೆ 1967ನೇ ಇಸವಿಯ ವರದಿ ಈ ನಾಲ್ಕನೇ ಮಹಾಸಭೆಯಲ್ಲಿ ಇದೇ ಪ್ರಥಮತಃ ಚರ್ಚೆಗೆ ಬರುತ್ತಾ ಇದೆ. 1966—67ನೇ ಇಸವಿ ರಿಪೋರ್ಟ್‌ನ್ನು ಸರಕಾರದವರಿಗೆ 1968ನೇ ಯಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಕೊಟ್ಟಿದ್ದರೂ ಅದನ್ನು ಇಷ್ಟು ದಿವಸಗಳವರೆಗೆ ಹಾಗೆಯೇ ಇಟ್ಟುಕೊಂಡು ಈಗ ಸಭೆಯ ಮುಂದೆ ಇಟ್ಟಿರತಕ್ಕಂಥದ್ದನ್ನು ನೋಡಿದರೆ ಇದು ಒಂದು ಸುಮ್ಮನೆ ಒಂದು ಸಂಪ್ರದಾಯಿಕವಾಗಿ ಒಂದು ವರದಿಯ ಹಾಗೆ ಕಾಣುತ್ತದೆ. ಹೋದ ಸಾರಿ 1963ನೆ ಇಸವಿ ಆಡಳಿತದ ವರದಿಗಳನ್ನು ಈ ಮನೆ ನಮ್ಮ ಮುಂದೆ ಇಟ್ಟಹಾಗೆ ಇದನ್ನು ಇಟ್ಟಿದ್ದನ್ನು ನೋಡಿದರೆ ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಈ ಸರಕಾರ ಯಾವ ತರಹದ ಗೌರವವನ್ನು ಸಲ್ಲಿಸುತ್ತಾ ಇದೆ ಯಾವ ಮಾನ್ಯತೆಯನ್ನು ಕೊಡುತ್ತಾ ಇದೆ ಎಂದು ಗೊತ್ತಾಗುತ್ತದೆ. ಪಬ್ಲಿಕ್ ಸರ್ವಿಸ್ ಕಮಿಷನ್ನಿನ ವರು ಮಾಡುತ್ತಾ ಇರತಕ್ಕಂಥಾ ಕಾರ್ಯದಲ್ಲಿ ನೀವು ಎಷ್ಟು ಮಟ್ಟಿಗೆ ಅವರ ಮೇಲೆ ಗಮನವನ್ನು ಇಟ್ಟಿದ್ದೀರಿ ಎನ್ನತಕ್ಕಂಥದನ್ನು ನಾವು ಅರ್ಥ ಮಾಡಿಕೊಳ್ಳಬಹುದು.

ನಮ್ಮ ರಾಜ್ಯಾಂಗದಲ್ಲಿ, ಉಚ್ಚ ನ್ಯಾಯಾಸ್ಥಾನವಾದ ಹೈಕೋರ್ಟ್ ಯಾವ ರೀತಿ ಪ್ರಥಮ ಸ್ಥಾನವನ್ನು ಪಡೆದಿದೆಯೋ ಅದೇ ರೀತಿಯಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ ಸಹ ಇರಬೇಕು ಎಂಬುದು ಒಂದು ಪ್ರಶ್ನೆ. ಅದು ಜುಡಿಷಿಯರ್ ಬಾಡಿ ಇದ್ದಂತೆ ಇರಬೇಕು ಎನ್ನುವ ದೃಷ್ಟಿಯಿಂದ ರಾಷ್ಟ್ರಾಂಗ ಬರೆಯತಕ್ಕವರು ಕೆಲವು ವಿಧಿ ನಿಯಮಗಳನ್ನು ಮಾಡಿ ಪಬ್ಲಿಕ್ ಸರ್ವಿಸ್ ಕಮೀಷನ್ ಯಾವ ರೀತಿಯಾಗಿ ಇರಬೇಕು. ಅದರ ರಚನೆ ಹೇಗೆ ಇರಬೇಕು, ಅದರ ಕಾರ್ಯಕ್ರಮ ಯಾವ ರೀತಿಯಾಗಿ ಇರಬೇಕೆಂಬುದನ್ನು ತಿಳಿಸಿದ್ದಾರೆ. ಅದನ್ನು ಬಹಳ ಸ್ಪಷ್ಟವಾಗಿ 323ನೇ ಆರ್ಟಿಕಲ್ಲಿನಲ್ಲಿ ನಮೂದಿಸಿದ್ದಾರೆ. ಪ್ರತಿ ವರ್ಷವೂ ಪಬ್ಲಿಕ್ ಸರ್ವಿಸ್ ಕಮಿಷನ್ ಏನು ಕೆಲಸ ಮಾಡುತ್ತದೆಯೋ ಅದರ ವರದಿಯನ್ನು ಈ ಸಭೆಯ ಮುಂದೆ ಇಡಬೇಕು. ಆ ರೀತಿಯಾಗಿ ಅದನ್ನು ಈ ಸಭೆಯ ಮುಂದೆ ಇಟ್ಟು ಪಬ್ಲಿಕ್ ಸರ್ವಿಸ್ ಕಮಿಷನ್ ಯಾವ ರೀತಿಯಾಗಿ ಕೆಲಸಮಾಡಿದೆ, ಸರ್ಕಾರಕ್ಕೆ ಯಾವ್ಯಾವ ಅಡ್ವೈಜ್‌ಗಳನ್ನು ಕೊಟ್ಟಿದೆ, ಅದನ್ನು ಸರ್ಕಾರದವರು ಎಷ್ಟರಮಟ್ಟಿಗೆ ಗಮನದಲ್ಲಿಟ್ಟುಕೊಂಡಿದ್ದಾರೆಂಬುದನ್ನು ತಿಳಿಸಬೇಕೆಂದು ಇದರಲ್ಲಿ ಹೇಳಿದೆ. ಸರ್ಕಾರದವರು ಪಬ್ಲಿಕ್ ಸರ್ವಿಸ್ ಕಮಿಷನ್ ಹೇಳಿದ ಮಾತನ್ನು ಅಂಗೀಕರಿಸದಿದ್ದರೆ ಯಾವ ಕಾರಣದಿಂದ ಇವರು ಅಂಗೀಕರಿಸಿಲ್ಲವೆನ್ನುವ ವರದಿಯನ್ನೂ ಸಹ ಈ ಮಾನ್ಯ ಸಭೆಯ ಮುಂದೆ ಇಡಬೇಕೆಂದು ಇದರಲ್ಲಿ ನಮೂದಿಸಿದ್ದಾರೆ. ಈ ಪಬ್ಲಿಕ್ ಸರ್ವಿಸ್ ಕಮಿಷನ್ ವರದಿ ಏತಕ್ಕೆ ಅಷ್ಟು ಮುಖ್ಯವಾಗಿದೆಯೆನ್ನುವುದನ್ನು ನೋಡಬೇಕಾದರೆ ನಾವು ಒಂದು ವಿಚಾರವನ್ನು ಮಾತ್ರ ಗಮನದಲ್ಲಿಟ್ಟುಕೊಳ್ಳಬೇಕು. ಆರ್ಟಿಕಲ್ 16ರಲ್ಲಿ ನಮಗೆ ಏನು ಮೂಲಭೂತ ಹಕ್ಕುಗಳು ಇವೆಯೋ ಅವನ್ನು ಚೆನ್ನಾಗಿ ಹೇಳಿದ್ದಾರೆ. 16 (1)ನೇ ಕಲಂನಲ್ಲಿ ಅದನ್ನು ಬಹಳ ಸ್ಪಷ್ಟವಾಗಿ ನಮೂದಿಸಿದ್ದಾರೆ. ಈ ರಾಜ್ಯದಲ್ಲಿ ಪ್ರತಿಯೊಬ್ಬರಿಗೂ ಅದರಲ್ಲಿಯೂ ಈ ದೇಶದಲ್ಲಿ ಸರ್ಕಾರದಲ್ಲಿ ಭಾಗವಹಿಸತಕ್ಕ ನಾಗರಿಕರಿಗೂ ಸರ್ವೇಸಾಮಾನ್ಯವಾದ ಹಕ್ಕು ಇರಬೇಕೆಂಬ ವಿಧಿ ಇದೆ. ಅದನ್ನು 4ನೇ ಕಲಂನಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ, ಅದು ಬಹಳ ಮುಖ್ಯವಾದುದು. ಅದನ್ನು ನಾವು ಮರೆಯುವ ಹಾಗೆ ಇಲ್ಲ.

MR. SPEAKER.—I want to know up to what time this debate should continue? The debate has to be finished today. I have not fixed any time limit for speeches, but if there are a number of speakers I think some time limit may be necessary.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಬಿಜಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಒಪ್ಪಿರುವ ಪ್ರಕಾರ ಇವತ್ತು ಈ ಕೆಲಸ ಮುಗಿಯಬೇಕು. ಇನ್ನುಳಿದ ಕಾರ್ಯಗಳನ್ನು ಸೋಮವಾರ ಸಾಯಂಕಾಲಕ್ಕೆ ಪೂರೈಸಬೇಕು. ಅದು ಅಗಿರತಕ್ಕ ತೀರ್ಮಾನ. ಆ ತೀರ್ಮಾನಕ್ಕೆ ವಿರೋಧವಾಗಿ ನಡೆದುಕೊಳ್ಳುವ ಸಂಭವ ಏನೂ ಇಲ್ಲ. ಈಗಾಗಲೇ 5 ಗಂಟೆಯಾಗಿದೆ. ಹೆಚ್ಚು ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಅವಕಾಶ ಸಿಗದೇ ಇರಬಹುದು. ಅದ್ದರಿಂದ ತಮ್ಮಲ್ಲಿ ನಾನು ಒಂದು ಸಲಹೆ ಮಾಡುತ್ತೇನೆ. ಸೋಮವಾರ ಎರಡು ಹೊತ್ತು ಕುಳಿತು ಇದನ್ನು ಹೆಚ್ಚಿಗೆ ಚರ್ಚೆಮಾಡುವುದಕ್ಕೆ ಅವಕಾಶವನ್ನು ತಾವು ಕಲ್ಪಿಸಿಕೊಡಬೇಕೆಂದು ತಮ್ಮಲ್ಲಿ ನಾನು ಸೂಚನೆ ಮಾಡುತ್ತೇನೆ.

ಶ್ರೀ ಎಲ್. ಶ್ರೀಕಂಠಯ್ಯ.—ಇದು ಅತಿ ಮುಖ್ಯವಾದ ವರದಿ. ಮಾನ್ಯ ಶ್ರೀ ಸಿದ್ಧವೀರಪ್ಪ ನವರು ಒಂದು ಗಂಟೆ ತೆಗೆದುಕೊಂಡಿದ್ದಾರೆ. ಅತ್ತ ಕಡೆಯವರು ಮತ್ತು ಇತ್ತ ಕಡೆಯವರು ಇನ್ನೂ ಮಾತನಾಡಬೇಕಾಗಿದೆ. ಕೆಲವು ರಿಜರ್‌ವೇಷನ್‌ಗಳ ಬಗ್ಗೆ ನಾನು ಬಹಳವಾಗಿ ಮಾತನಾಡ ಬೇಕಾಗಿದೆ. ಷೆಡ್ಯೂಲ್ಡ್ ಟ್ರೈಬ್ಸ್ ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್ ಇತರೇ ಹಿಂದುಳಿದ ಜನಾಂಗಗಳು ಅಂದರೆ, ಕ್ರಿಶ್ಚಿಯನ್ ಮಿಕ್ಕ ಇತರ ಹಿಂದುಳಿದ ಕೋಮುಗಳು—ಇವರಿಗೆ ಸ್ಥಾನಮಾನಗಳು ಸರಿಯಾಗಿ ಸಿಗುತ್ತಾ ಇಲ್ಲ. ಹಳ್ಳಿಯವರು ಹಳ್ಳಿಯವರಾಗಿಯೇ ಉಳಿಯುತ್ತಿದ್ದಾರೆ. ಈ ವಿಷಯ ದಲ್ಲಿ ಸೂಕ್ಷ್ಮ ಸಲಹೆಗಳನ್ನು ಸರಕಾರಕ್ಕೆ ಕೊಡಬೇಕಾಗಿದೆ. ಆದ್ದರಿಂದ ಮಾನ್ಯ ಶ್ರೀ ಹುಚ್ಚಮಾಸ್ತಿ ಗೌಡರು ಹೇಳಿದ ಹಾಗೆ ಇವತ್ತು 6 ಗಂಟೆಯವರೆಗೂ ಕೂಡೋಣ. ಸೋಮವಾರ ಬೆಳಗ್ಗೆ ಮತ್ತು ಸಾಯಂಕಾಲ ಎರಡು ಹೊತ್ತು ಅದಿವೇಶನ ಕೂಡು ಚರ್ಚೆಮಾಡೋಣ.

[MR. CHAIRMAN (SRI B. N. RAMEGOWDA) in the Chair]

ಶ್ರೀ ಎಚ್. ಸಿದ್ಧವೀರಪ್ಪ.—ನಾನು ಈಗ ಬ್ಯಾಕ್‌ವರ್ಡ್ ಕ್ಲಾಸಸ್ ಆಫ್ ಸಿಟಿಜನ್ಸ್ ಬಗ್ಗೆ ಏವರಣೆ ಮಾಡತಕ್ಕದ್ದು ಇದೆ. ಅದು ಯಾರು ಜಾತಿ ಆಧಾರದ ಮೇಲೆ ಅಲ್ಲ. ನಾನು ವಿವರಣೆ ಮಾಡತಕ್ಕದ್ದು ನಮ್ಮ ರಾಜ್ಯದಲ್ಲಿ ಯಾವ ಆರ್ಥಿಕವಾಗಿ, ಸಾಮಾಜಿಕವಾಗಿ ಯಾರು ಬಹಳ ಹಿಂದು ಳಿದಿದ್ದಾರೋ ಅಂತಹವರನ್ನು ಬ್ಯಾಕ್‌ವರ್ಡ್ ಕ್ಲಾಸ್ ಆಫ್ ಸಿಟಿಜನ್ಸ್ ಎಂದು ನಾವು ಹೇಳುವುದಕ್ಕೆ ಯೋಚನೆ ಮಾಡಬೇಕು. ಸಾಮಾನ್ಯವಾಗಿ ಇದುವರೆಗೆ ಬಂದಿರತಕ್ಕದ್ದು ಗ್ರಾಮಾಂತರ ಪ್ರದೇಶ ಗಳಿಂದ ಬಂದಿರತಕ್ಕ ಜನರು ಯಾರು ಇದ್ದಾರೆಯೋ ಅವರಿಗೆ ಯಾವರೀತಿಯಾದಂಥ ಬ್ಯಾಕ್‌ಗ್ರೌಂಡ್ ಇರುವುದಿಲ್ಲ. ಅವರು ಬಹಳ ಹಿಂದುಳಿದಿದ್ದಾರೆ, ಎನ್ನುವ ಭಾವನೆ ಇದೆ. ಈ ಬ್ಯಾಕ್‌ವರ್ಡ್ ಕ್ಲಾಸ್ ಎನ್ನುವುದು ಹಿಂದೂಸ್ಥಾನದಲ್ಲಿ ಎಲ್ಲಾ ಕಡೆಯೂ ಒಂದೇ ರೀತಿಯಿಲ್ಲಿಲ್ಲ. ಇದಕ್ಕೆ ಒಂದು ಉದಾಹರಣೆಯನ್ನು ಮಾನ್ಯ ಶ್ರೀ ಅಯ್ಯಂಗಾರಿಯವರು ಹೇಳುತ್ತಿದ್ದಾರೆ. ಗುಜರಾತಿನಲ್ಲಿ ಬ್ರಾಹ್ಮಣ ರನ್ನೇ ಬ್ಯಾಕ್‌ವರ್ಡ್ ಕ್ಲಾಸ್ ಎಂಬುದಾಗಿ ಪರಿಗಣಿಸಿದ್ದಾರೆ. ಏಕೆಂದರೆ ಅವರು ಆರ್ಥಿಕವಾಗಿ ಬಹಳ ಹಿಂದುಳಿದಿದ್ದಾರೆ. ಈ ಬ್ಯಾಕ್‌ವರ್ಡ್ ಕ್ಲಾಸ್ ವಿವರಣೆಯನ್ನು ಕೊಡಬೇಕಾದರೆ, ಇದರ ಬಗ್ಗೆ ನಾನು ಯಾವ ಮಾತನ್ನು ಹೇಳಿದರೂ ಅದು ಯಾವುವಾದರೂ ಒಂದು ಜಾತಿಯ ಆಧಾರದ ಮೇಲೆ ಹೇಳುತ್ತಾ ಇಲ್ಲ. ಎಜ್ಯುಕೇಷನಲ್, ಸೋಷಿಯಲ್, ಇಕನಾಮಿಕಲ್ ಆಗಿ ಬ್ಯಾಕ್‌ವರ್ಡ್ ಎಂದು ಯಾರನ್ನು ಕರೆಯುತ್ತೇವೋ ಅಂತಹವರ ವಿಷಯದಲ್ಲಿ ರಿಜರ್‌ವೇಷನ್ ಮಾಡಬೇಕೆಂದು ಹೇಳಿದ್ದೇವೆ. ಬ್ಯಾಕ್‌ವರ್ಡ್ ಕ್ಲಾಸ್ ಕಮಿಟಿಯನ್ನು ಕೇಂದ್ರಸರ್ಕಾರದವರು ನೇಮಿಸಿದ್ದು. ಅದರ ಮೇಲೆ ಅವರ ವರದಿಯೂ ಬಂತು. ಆದರೂ ಅದರ ಮೇಲೆ ಈಗ ವಿವರಣೆ ಮಾಡುವುದಕ್ಕೆ ಹೋಗುವುದಿಲ್ಲ. ರಿಜರ್‌ವೇಷನ್ ಏನಿದೆಯೋ ಅದರ ವಿಚಾರದಲ್ಲಿ ನಮ್ಮ ಸರ್ಕಾರ ಏನಾದರೂ ಯೋಚನೆ ಮಾಡಿದೆಯೇ, ಅದು ಅವರ ಗಮನದಲ್ಲಿದೆಯೇ, ಅದನ್ನು ಅವರ ಲಕ್ಷ್ಯದಲ್ಲಿಟ್ಟು ಕೊಂಡಿದ್ದಾರೆಯೇ ಎಂಬ ವಿಚಾರವನ್ನು ನಾವು ಈಗ ಚರ್ಚೆಮಾಡಬೇಕಾಗುತ್ತದೆ.

5-00 P. M.

ಇನ್ನು ಒಂದೆರಡು ವಿಚಾರಗಳನ್ನು ಹೇಳಬೇಕೆಂದಿದ್ದೇನೆ. ಆರ್ಟಿಕಲ್ 340,341, ಮತ್ತು 342—ಇವು ಹಿಂದುಳಿದ ವರ್ಗಗಳಾದ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ಗೆ ಸಂಬಂಧ ಪಟ್ಟ ನಿಯಮಗಳು. ಇವರಿಗೆ ಯಾವ ರೀತಿ ನೇಮಕಾತಿಗಳನ್ನು ಕೊಡಬೇಕೆಂದು ರಾಜ್ಯಾಂಗದಲ್ಲಿ ಸೂಚಿಸಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು ಆ ನೇಮಕಾತಿಗಳನ್ನು ಕೊಡುವ ವಿಚಾರದಲ್ಲಿ ಯೋಚನೆ ಮಾಡಬೇಕಾಗಿದೆ. ಆದರೆ ನಾವು ಹಿಂದೆ ಇದ್ದಂತಹ ಪರಿಸ್ಥಿತಿಯಲ್ಲಿಲ್ಲ. ಆರ್ಟಿಕಲ್ 16ರ ಪ್ರಕಾರ ''ಎವ್ರೆರಿ ಸಿಟಿಜನ್ ಹ್ಯಾಸ್ ರೈಟ್ ಫಾರ್ ಎಂಪ್ಲಾಮೆಂಟ್ ಅಂಡರ್ ದಿ ಸ್ಟೇಟ್'' — ಅದನ್ನು ಗಮನದಲ್ಲಿಟ್ಟುಕೊಂಡು ನಮ್ಮ ಮೈಸೂರು ಪೇ ಕಮಿಷನಿನವರೂ ಸಹ ರಿಪೋರ್ಟಿನಲ್ಲಿ, ತಮ್ಮ ಮೊದಲನೆಯ ಚ್ಯಾಪ್ಟರಿನಲ್ಲಿ ಸರ್ವಿಸ್ ಕಂಡೀಷನ್ ಏನಿರಬೇಕು. ಯಾವ ರೀತಿಯಲ್ಲಿದ್ದರೆ, ಉತ್ತಮವಾಗುತ್ತದೆ, ಮತ್ತು ಸರ್ವಿಸಿನಲ್ಲಿ ಅತ್ಯಪ್ಪಿ ಬರದ ಹಾಗೆ ಹೇಗೆ ನೋಡಿಕೊಳ್ಳಬೇಕೆಂಬು ದನ್ನು ಬಹಳ ವಿಫುಲವಾಗಿ ಚರ್ಚೆಮಾಡಿದ್ದಾರೆ. ಇದು ಸಹ ಸರ್ಕಾರದ ಗಮನಕ್ಕೆ ಬಂದ ಹಾಗೆ ಕಾಣಲಿಲ್ಲ. ನಮ್ಮ ರಾಜ್ಯದಲ್ಲಿ ಏನಾಗಿದೆ ಅಂದರೆ, ಪಬ್ಲಿಕ್ ಸರ್ವಿಸ್ ಕಮಿಷನಿಗೆ ನೇಮಕ ಮಾಡತಕ್ಕಂತಹ ಕಾಲದಲ್ಲಿಯೂ ಸಹ ಇವರ ದೃಷ್ಟಿಯಲ್ಲ, ಇವರಿಗೆ ಬೇಕು ಬೇಕಾದ ಹಾಗೆ ನೇಮಕ ಗಳನ್ನು ಮಾಡಿದ್ದಾರೆ. ನಾನ್ ಆಫೀಷಿಯರ್ಸ್‌ನ್ನು ನೇಮಕ ಮಾಡತಕ್ಕ ಕಾಲದಲ್ಲಿಯೂ ಸಹ ಇವರಿಗೆ ಬೇಕಾದ ಹಾಗೆ ನೇಮಕ ಮಾಡಿದ್ದಾರೆ. ಇದನ್ನು ಯಾವ ಆಧಾರದ ಮೇಲೆ ಹೇಳುತ್ತಿದ್ದೇನೆಂದರೆ ಇದರ ಬಗ್ಗೆ ಈಗಾಗಲೇ ಒಂದು ಅಂಶ ಇದೆ. ಶ್ರೀಮಾನ್ ಚನ್ನಿಗರಾಮಯ್ಯನವರು ನನ್ನಶ್ನೇಹಿತರು

ಅವರ ಮೇಲೆ ವೈಯಕ್ತಿಕವಾಗಿ ನಾನು ಏನೂ ಮಾತನಾಡುತ್ತಾ ಇಲ್ಲ. ಸರ್ಕಾರ ಮೊದಲು ಅವರನ್ನು 4-7-1962ರಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ನೇಮಿಸಿತು. ಅವರು 6-7-1962 ರಂದು ಅಧಿಕಾರ ವಹಿಸಿಕೊಂಡರು. ಆ ಮೇಲೆ ಅವರನ್ನು 14-2-1963 ರಂದು ಚೇರ್‌ಮೇನಾಗಿ ಮಾಡಿದರು. ಅವರು 15-2-1963 ರಂದು ಚಾರ್ಜ್ ವಹಿಸಿಕೊಂಡರು. ಕೆಲವು ರಾಜ್ಯಾಂಗದಲ್ಲಿ ಹೇಳಿರುವ ಅವಧಿಗಿಂತ 9 ತಿಂಗಳು ಹೆಚ್ಚಾಗಿ ಅಲ್ಲಿ ಇದ್ದರು. ಆ ಕಾಲದಲ್ಲಿ ಯಾವ್ಯಾವ ನೌಕರಿಗಳಿಗೆ ಯಾರ್ಯಾರನ್ನು ಇವರು ನೇಮಿಸಿದ್ದಾರೆ, ಅದು ಇಲ್ಲೀಗಲ್, ಅದನ್ನು ಮಾಡುವುದಕ್ಕೆ ಪಬ್ಲಿಕ್ ಸರ್ವಿಸ್ ಕಮಿಶನಿಗೆ ಅಧಿಕಾರವಿಲ್ಲ, ಮತ್ತು ಅದು ಲಾಯಕ್ಕಿಲ್ಲವೆಂದು ಅನೇಕ ರಿಟ್ ಅರ್ಜಿಗಳು ಕೋರ್ಟಿನಲ್ಲಿ ಬಿದ್ದಿವೆ. ಅವರು 6 ವರ್ಷದ ಮಟ್ಟಿಗೆ ಮಾತ್ರ ಇರಬಹುದು, ಅದಕ್ಕಿಂತ ಮೇಲೆ ಇರಲು ಲಾಯಕ್ಕಿಲ್ಲವೆಂದು ರಿಟ್ ಅರ್ಜಿಯಲ್ಲಿ ಹೇಳಿದ್ದಾರೆ. ಈ ವಿಷಯದಲ್ಲಿ ನಾನು ಏನೂ ಹೇಳುವುದಿಲ್ಲ. ಹಿಂದೆ ಇದ್ದಂತಹ ವಿಚಾರದಲ್ಲಿಯಾಗಲಿ, ಅಥವಾ ಈಗ ಇರತಕ್ಕಂತಹ ವಿಚಾರದಲ್ಲಿ ಯಾಗಲಿ, ನಾನು ಏನೂ ಹೇಳುವುದಿಲ್ಲ. ಆದರೆ ಇವರು ಆ ಹುದ್ದೆಗೆ ಯಾರನ್ನಾದರೂ ನೇಮಿಸಬೇಕಾದರೆ, ಕೊನೆಯ ಪಕ್ಷ ಆ ವ್ಯಕ್ತಿಗೆ 5-6 ವರ್ಷ ಸರ್ವಿಸ್ ಇರುವ ರೀತಿಯಲ್ಲಿ ನೇಮಿಸಬೇಕು. ಅದು ಬಿಟ್ಟು ಇವರು ಒಂದೆರಡು ವರ್ಷ ಅಲ್ಲಿರುವವರನ್ನು ನೇಮಿಸಿದರೆ ಸರಿಯಾಗಲಾರದು. ಹೆಚ್ಚು ಸರ್ವಿಸ್ ಇರುವವರನ್ನು ಅಲ್ಲಿ ನೇಮಿಸಿದರೆ, ಅಲ್ಲಿಯ ಆಡಳಿತವನ್ನು ಇನ್ನೂ ಉತ್ತಮವಾಗಿ ಮಾಡಲು ಅನುಕೂಲವಾಗುತ್ತದೆ. ಆದರೆ ಆನ್ ದಿ ವರ್ಜ್ ಆಫ್ ರಿಟೈರ್‌ಮೆಂಟ್‌ನಲ್ಲಿರುವವರನ್ನು ಅಲ್ಲಿ ನೇಮಿಸಿದರೆ, ಅದರಿಂದ ಮಂತ್ರಿಯವರಿಗೂ ಸುಖವಿಲ್ಲ, ಆ ಆಫೀಸರಿಗೂ ಸುಖವಿಲ್ಲ. ಅಲ್ಲಿ ಯಾರಾದರೂ ಒಂದು 6 ವರ್ಷ ಸರ್ವಿಸ್ ಇರುವವರನ್ನು ನೇಮಿಸಿದರೆ, ಅವರಿಗೆ ಅಲ್ಲಿಯ ಒಂದು ಗ್ರಿಪ್ ಬರುತ್ತದೆ, ಮತ್ತು ಯಾವರೀತಿ ಆಡಳಿತದ ಹಿಡಿತವನ್ನು ತೆಗೆದುಕೊಂಡು ಕೆಲಸ ಮಾಡಬೇಕೆಂಬುದು ತಿಳಿದು ಕೊಳ್ಳುತ್ತಾರೆ. ಇವೊತ್ತಿನ ದಿವಸ ಪಬ್ಲಿಕ್ ಸರ್ವಿಸ್ ಕಮಿಷನ್ ವಿಚಾರದಲ್ಲಿ ಏನು ಒಂದು ರಿಪೋರ್ಟು ಕೊಟ್ಟಿದ್ದಾರೆ, ಅಷ್ಟೇ ಸಾಕಾ, ಅದರಲ್ಲಿ ಎರ್ರಾ ಇದೆ. 1956ನೇ ಇನವಿಯಿಂದ ನಮ್ಮ ರಾಜ್ಯ ಪುನರ್ರಣೆಯಾದ ಮೇಲೆ ಬಂದಂತಹ ಆಡಳಿತಗಾರರು ತಮಗೆ ಬೇಕು ಬೇಕಾದ ರೀತಿಯಲ್ಲಿ ಆಡಳಿತಮಾಡಿದ್ದಾರೆ. ನೌಕರಿಗೆ ತೆಗೆದುಕೊಳ್ಳುವ ವಿಚಾರದಲ್ಲಿ ಹಸ್ತಕ್ಷೇಪ ಮಾಡಿ ನ್ಯಾಯನ ಪಕ್ಷಪಾತ ಮಾಡಿ, ತಮಗೆ ಬೇಕು ಬೇಕಾದ ಹಾಗೆ ಮಾಡಿರುವುದರಿಂದ ಇವತ್ತು ನಾವಿರಾರು ರಿಟ್ ಅರ್ಜಿಗಳು ಹೈಕೋರ್ಟಿನಲ್ಲಿ ಹೋಗಿ, ಅಲ್ಲಿ ಮೂರು ಬೆಂಚುಗಳು ಈ ಸರ್ವಿಸ್ ವಿಚಾರದಲ್ಲಿ ತೀರ್ಮಾನ ಕೊಡುತ್ತಾ ಹೋದರೂ, ಇನ್ನೂ ಸಾವಿರಾರು ಅರ್ಜಿಗಳು ವಿಚಾರಣೆಯಾಗದೆ ಅಲ್ಲೇ ಬಿದ್ದಿವೆ. ಇದಕ್ಕೆ ಕಾರಣವೇನೆಂದರೆ, ಇವರು ಉದ್ದೇಶಪೂರ್ವಕವಾಗಿ ಇದನ್ನು ಬಿಟ್ಟಿರಬಹುದು ಅಥವಾ ಇವರ ಆಡಳಿತದ ಅದಕ್ಷತೆ ಇರಬಹುದು, 5 ರಾಜ್ಯಗಳಿಂದ ಬಂದ ಅನೇಕ ರೀತಿಯ ಸರ್ವಿಸನ್ನು ಒಟ್ಟಾಗಿ ಸೇರಿಸಿ, ನಾವೆಲ್ಲಾ ಒಂದೇ ಕುಟುಂಬಕ್ಕೆ ಸೇರಿದ ರೀತಿಯಲ್ಲಿ ಇರುವಂತೆ ಇವರು ಪ್ರಯತ್ನ ಮಾಡಿಲ್ಲ. ಹೈದರಾಬಾದ್ ಕರ್ಣಾಟಕದವರು ಬೇರೆ ಉತ್ತರ ಕರ್ಣಾಟಕದವರು ಬೇರೆ ಹಳೆಯ ಮೈಸೂರಿನವರು ಬೇರೆ, ಎಂದು ಮಾಡಿ, ಇವತ್ತು ಆಡಳಿತದಲ್ಲಿ ಎಲ್ಲಾ ನೋಡಿದರೂ, ನೌಕರರಲ್ಲಿ ಬೇರೆ ಬೇರೆ ರೀತಿಯ ಮನೋಭಾವ ಇದೆ. ಮೈಸೂರಿನವರು ಒಂದು ರೀತಿ ಮಾತನಾಡುತ್ತಾರೆ, ಹೈದರಾಬಾದ್ ಕರ್ಣಾಟಕದವರು ಒಂದು ರೀತಿ ಮಾತನಾಡುತ್ತಾರೆ ಮತ್ತು ಮದ್ರಾಸ್ ಕರ್ಣಾಟಕದವರು ಇನ್ನೊಂದು ರೀತಿ ಮಾತನಾಡುತ್ತಾರೆ. ಈ ರೀತಿ ರಾಜ್ಯದ ಆಡಳಿತವನ್ನು ಅಂಬಾರಿ ದರ್ಬಾರು ಮಾಡಿ, ನಮ್ಮ ರಾಜ್ಯದ ಅಧಿಕಾರಿಗಳಲ್ಲಿ ಒಂದು ಬಿಗುಪ್ಪು ಉಂಟಾಗುವ ರೀತಿಯಲ್ಲಿ ಮಾಡಿದ್ದಾರೆ. ಇವರಿಂದ ರಾಜ್ಯದ ಆಡಳಿತದಲ್ಲಿ ಲಂಚ ಭ್ರಷ್ಟಾಚಾರಗಳು ಅದಕ್ಷತೆ ಮತ್ತು ಆಡಳಿತದ ದೌರ್ಬಲ್ಯ ಎದ್ದು ಕಾಣುವುದಕ್ಕೆ ಕಾರಣವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಆ ಸಮಯದಲ್ಲಿ ಕೂಡಲೇ ಎರ್ರಾ ಸರ್ವಿಸನ್‌ಗಳನ್ನು ಇಂಟಿಗ್ರೇಟ್ ಮಾಡಿ, ಬೇರೆ ರೀತಿಯಲ್ಲಿ ಯೂನಿಫಾರಂ ರಿಕ್ರೂಟ್‌ಮೆಂಟ್ ರೂಲ್ಸ್ ತಂದು, ಅದಕ್ಕೊಬ್ಬ ಒಬ್ಬ ಮಂತ್ರಿ, ಒಂದು ಇರಾಖೆ ಮಾಡುವಕ್ಕೆ ಏನು ತೊಂದರೆಯಾಗಿತ್ತು? ಆ ಪಾಪದಲ್ಲಿ ನಾನು ಸಹ ಭಾಗಿಯಾಗಿದ್ದೇನೆ. ಇದರಲ್ಲಿ ಹಳೆಯ ಮೈಸೂರಿನ ಅಧಿಕಾರಿಗಳ ತಪ್ಪೇನೂ ಇಲ್ಲ. ಇಂಟಿಗ್ರೇಟ್ ಆಗತಕ್ಕ ಕಾಲದಲ್ಲಿ ಯಾರಿಗೂ ಯಾವರೀತಿಯಲ್ಲಿಯೂ ಬದಲಾವಣೆಯಾಗದಂತೆ ಪ್ರೊಟೆಸ್ಟೋ ಇರಬೇಕೆಂದು ಹೇಳುತ್ತಿದ್ದರು. ಕೆಲವರಿಗೆ ಇವತ್ತು ಆಗಬಾರದ ತೊಂದರೆಯಾಗಿದೆಯೆಂದು ಹೇಳುತ್ತಿದ್ದಾರೆ. ಅದು ನಿಜವೋ ಸುಳ್ಳೋ ನನಗೆ ತಿಳಿಯದು. ಮೊದಲೇ ಸರಿಯಾಗಿ ನೋಡಿಕೊಂಡಿದ್ದರೆ ಈ ತೊಂದರೆಗಳು ಬರುತ್ತಿರಲಿಲ್ಲ, ಮತ್ತು ಜಾತೀಯತೆಯ ಸಮಸ್ಯೆ ಬರುತ್ತಿರಲಿಲ್ಲ. ಹಳೆಯ ಮೈಸೂರಿನ ಅಧಿಕಾರಿಗಳಿಗೆ ಸ್ವಲ್ಪ ಅಲ್ಲಿ ಇಲ್ಲಿ ಏನಾದರೂ ಒಂದು ಅಣಿಯಪ್ಪು ಹೆಚ್ಚು ಕಮ್ಮಿ ಆಗಿದ್ದರೆ ಅದು ಬಯಲಿಗೆ ಬರುತ್ತಿರಲಿಲ್ಲ. ಮೊದಲು ಯಾರಿಗೆ ಮೆರಿಟ್ ಇದೆ, ಯಾರಿಗೆ ದಕ್ಷತೆ ಇದೆ, ಅಂಥವರಿಗೆ ಯಾವ ರೀತಿಯು ಅನ್ಯಾಯವಾಗದ ರೀತಿಯಲ್ಲಿ ಮುಂದಿನ ಬಡ್ತಿ ಸಿಗುತ್ತಿತ್ತು. ಆದರೆ ಇವೊತ್ತಿನ ದಿವಸ ಏನಾಗಿದೆ? ನ್ಯಾಯುವೋ ಅನ್ಯಾಯುವೋ, ಸತ್ಯವೋ,

(ಶ್ರೀ ಎಚ್. ಸಿದ್ಧವೀರಪ್ಪ)

ಅನತ್ಯವೋ, ಜನರು ಏನೇನು ಅಂದುಕೊಳ್ಳುತ್ತಿದ್ದಾರೆ. ಜನರಿಗೆ ನ್ಯಾಯ ದೊರೆಯುತ್ತಿದ್ದರೆ, ಇವತ್ತು ಅಧಿಕಾರಿಗಳ ಹಿಂದೆ ಸುತ್ತುವರಿಯುತ್ತಾ ಇರಲಲ್ಲ. ಇದೇ ರೀತಿ ಶಾಸಕರನ್ನು ಬೇರೆ ಯಾವ ಕೆಲಸ ಕೂಡ ಮಾಡಲಕ್ಕೆ ಜನರು ಬಿಡುತ್ತಾ ಇಲ್ಲ. ಸ್ವಾಮಿ, ನಮಗೆ ಅನ್ಯಾಯವಾಗಿದೆ, ಸ್ವಾಮಿ, ನಮಗೆ ಆದಾಗಿದೆ, ಸ್ವಾಮಿ ನಾವು ಲೋಕಲ್ ಕ್ಯಾಂಡಿಡೇಟ್ಸ್, ನಮ್ಮನ್ನು ತೆಗೆದು ಬಿಟ್ಟಿದ್ದಾರೆ,—ಹೀಗೆ ಪ್ರತಿನಿತ್ಯವೂ ಜನರ ಅಹವಾಲು ಇದ್ದೇ ಇರುತ್ತದೆ. ಇಲ್ಲ ಅನೇಕ ನಲ ಅದರ ಕೆಲವು ಕತೆಗಳನ್ನು ಹೇಳಿದ್ದೇನೆ. ಸೇರ್ಲ್ಸ್ ಟ್ಯಾಕ್ಸ್ ಇಲಾಖೆಯ ಕಥೆಯನ್ನೂ ಸಹ ಹೇಳುತ್ತಿದ್ದೆ. ಆದರೆ ಆ ಕಥೆಗಳನ್ನು ಹೇಳುತ್ತಾ ಹೋದರೆ, ಹುಚ್ಚು ಹಿಡಿಯಬಹುದು.

ಸರ್ಕಾರದವರು ಈ ರೀತಿ ಮಾಡುವುದರಲ್ಲಿ ಏನಾದರೂ ನ್ಯಾಯ ಇದೆಯೇ ? ಪ್ರೊಬೇಷನರಿ ಪೀರಿಯಡ್ ಮುಗಿದ ಮೇಲೆ ಏನಾದರೂ ಸ್ಯಾಟ್ಸ್‌ಫ್ಯಾಕ್ಟರಿ ಮಾಡಿ ರೆಕ್ಯೂಟ್‌ಮೆಂಟ್ ರೂಲ್ಸ್ ಮಾಡಿ ಅವರನ್ನು ರೆಗ್ಯುಲರೈಸ್ ಮಾಡಿದ್ದಾರೆ ಯಾವುದೂ ಬರುತ್ತಿರಲಲ್ಲ. ಯಾವ ತೊಂದರೆಯೂ ಬರುತ್ತಿರಲಲ್ಲ. ಕೆಲವು ಅಂಶಗಳನ್ನು ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ಅವರ ರಿಪೋರ್ಟಿನಲ್ಲಿ ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಇವರು ಮಾಡಿರತಕ್ಕದ್ದನ್ನೆಲ್ಲಾ ನಮ್ಮ ಮುಂದೆ ಇಡುವುದಕ್ಕೆ ಇವರು ಇಷ್ಟಪಡುತ್ತಿಲ್ಲ. ಅವುಗಳನ್ನೆಲ್ಲಾ ನಮ್ಮ ಮುಂದೆ ಇಡುವುದಕ್ಕೆ ಇವರಿಗೆ ಶಕ್ತಿಯೂ ಇಲ್ಲ. ಇದರಲ್ಲಿ ಹೇಳಿರುವಷ್ಟೇ ಸಾಕು. ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ಒಂದು ಹೇಳಿದರೆ ಇವರು ಒಂದು ಮಾಡಿದ್ದಾರೆ. ಪ್ರತಿಯೊಂದು ಡಿಪಾರ್ಟ್‌ಮೆಂಟಿನಲ್ಲಿಯೂ ಇದೇ ರೀತಿ ಮಾಡಿದ್ದಾರೆ. ಅಪಾಯಿಂಟ್‌ಮೆಂಟ್‌ಗಳನ್ನು ಇವರು ಸರಿಯಾದ ರೀತಿಯಲ್ಲಿ ಮಾಡಿಲ್ಲ. ಶ್ರೀಮಾನ್ ವೈ. ರಾಮಕೃಷ್ಣ ಅವರಿಗೆ ಸಂಬಂಧಪಟ್ಟ ಹೆಲ್ತ್ ಡಿಪಾರ್ಟ್‌ಮೆಂಟಿನಲ್ಲಿಯೂ ಇದೇ ರೀತಿ ನಡೆದಿದೆ. ಡಾ. ನಾಗಪ್ಪಆಳ್ವ ಅವರು ಈ ಡಿಪಾರ್ಟ್‌ಮೆಂಟಿನಲ್ಲಿ ಏನು ಅನ್ಯಾಯ ಮಾಡಿಟ್ಟು ಹೋಗಿದ್ದಾರೆ ಆ ಅನ್ಯಾಯವನ್ನು ಬಹುಶಃ ಯಾವ ಮಂತ್ರಿ ಆ ಸ್ಥಾನಕ್ಕೆ ಬಂದರೂ ಅದನ್ನು ಸರಿ ಮಾಡುವುದಕ್ಕೆ ಆಗುವದಿಲ್ಲ. 1961ನೇ ಇಸವಿಯಲ್ಲಿ ಶ್ರೀ ಪದ್ಮನಾಭಯ್ಯನವರು ಪಬ್ಲಿಕ್ ಸರ್ವೀಸ್ ಕಮಿಷನ್ ಚೇರ್ಮನ್ ಆಗಿದ್ದಾಗ ಈ ಡಿಪಾರ್ಟ್‌ಮೆಂಟಿನಲ್ಲಿ ರೆಕ್ಯೂಟ್‌ಮೆಂಟ್ ಆಯಿತು. ಆಗ ರೆಕ್ಯೂಟ್‌ಮೆಂಟಿಗೆ ಅಪ್ಲಿಕೇಷನ್ ಕರೆಯಲಲ್ಲ. 1961ನೇ ಇಸವಿಯಿಂದ ಈಚೆಗೆ ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ರೆಕ್ಯೂಟ್‌ಮೆಂಟ್ ಮಾಡುವವರೆಗೆ ಇವರು ನೂರಾರು ಅಪಾಯಿಂಟ್‌ಮೆಂಟುಗಳನ್ನು ಮಾಡಿದ್ದಾರೆ. ಇವುಗಳನ್ನು ಯಾವ ಆಧಾರದ ಮೇಲೆ ಯಾವ ಬಲದ ಮೇಲೆ ಮಾಡಿದ್ದಾರೆ ? ಯಾವ ರೆಕ್ಯೂಟ್‌ಮೆಂಟ್ ರೂಲ್ಸ್ ಇಟ್ಟುಕೊಂಡು ಅಪಾಯಿಂಟ್‌ಮೆಂಟ್‌ಗಳನ್ನು ಮಾಡಿದ್ದಾರೆ ಎಂಬುದನ್ನು ನೋಡಿದರೆ ತಮಗೆ ಬೇಕಾದವರನ್ನು ಮನಸ್ಸಿನಲ್ಲಿಟ್ಟುಕೊಂಡು ಅನೇಕರಿಗೆ ಅನೇಕರೀತಿಯಲ್ಲಿ ಒಂದು ಸಾವಿರರೂಪಾಯಿ, 600 ರೂಪಾಯಿಗಳ ಸಂಬಂಳಬರತಕ್ಕವರನ್ನು ಈ ಡಿಪಾರ್ಟ್‌ಮೆಂಟಿನಲ್ಲಿ ನೇಮಿಸಿ ಈ ಇಲಾಖೆಯನ್ನು ಹೊಲಸು ಮಾಡಿ ಇಟ್ಟಿದ್ದಾರೆ. ಕಾರಣವೇನೆಂದರೆ ಇದಕ್ಕೆ ರೆಕ್ಯೂಟ್‌ಮೆಂಟ್ ರೂಲ್ಸ್ ಮಾಡಿಲ್ಲ. ಮತ್ತು ಈ ಹುದ್ದೆಗಳಿಗೆ ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ನೇಮಿಸಿಲ್ಲ. ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ಸರ್ಕಾರಕ್ಕೆ ನೀವು ಅನ್ಯಾಯ, ಅಕ್ಷಮ್ಯ ಅಪರಾಧ ಮಾಡಿದ್ದೀರಾ ಎಂದು ಸರ್ಕಾರಕ್ಕೆ ಹೇಳಿದರೆ ಇವರು ನಮ್ಮ ಕೈಯಲ್ಲಿ ಅಧಿಕಾರ ಇದೆ ನಾವು ಅದನ್ನು ರೆಗ್ಯುಲರೈಜ್ ಮಾಡುತ್ತೇವೆ ಎಂದು ಆ ಅಪಾಯಿಂಟ್‌ಮೆಂಟ್‌ಗಳನ್ನು ರೆಗ್ಯುಲರೈಜ್ ಮಾಡಿದರು. ಯಾವ ನೌಕರರನ್ನು ನೇಮಕ ಮಾಡಿದ್ದು ತಪ್ಪು ಎಂದು ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ಹೇಳಿದರೋ ಅದನ್ನು ಲಕ್ಷ ಮಾಡದೆ ಸರ್ಕಾರದವರು ಅವರನ್ನೆಲ್ಲಾ ರೆಗ್ಯುಲರೈಜ್ ಮಾಡಿದರು. ಅದನ್ನು ಈ ವರದಿಯಲ್ಲಿ ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ಹೇಳಿದ್ದಾರೆ. ಇದರ ಜೊತೆಗೆ ಕೆಲವು ನೌಕರರ ವಿಷಯದಲ್ಲಿ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳಬೇಕು, ಡಿಸ್‌ಮಿಸ್ ಮಾಡಿ ಮನೆಗೆ ಕಳುಹಿಸಬೇಕು ಎಂದು ಹೇಳಿದಂತಹ ಸಂದರ್ಭದಲ್ಲಿ ಅದನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಳ್ಳದೇ ಅಲಕ್ಷ್ಯ ಮಾಡಿದ್ದಾರೆ. ಒಂದು ಸಂದರ್ಭದಲ್ಲಿ ಒಬ್ಬರು ಎಗ್ಸಿಕ್ಯುಟೀವ್ ಇಂಜಿನಿಯರು ಬಿಹಳ ಸಿಮೆಂಟ್ ಮೂಟೆ ಕದ್ದಿದ್ದಾರೆ, ಅವರ ಮೇಲೆ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳಬೇಕು, ಅವರನ್ನು ಡಿಸ್‌ಮಿಸ್ ಮಾಡಬೇಕು ಎಂದು ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ಹೇಳಿದರೆ ಅವರನ್ನು ಸೂಪರಿಂಟೆಂಡೆಂಟ್ ಇಂಜಿನಿಯರ್ ಆಗಿ ನೇಮಾ ಮಾಡಿದ್ದಾರೆ. ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ಸರ್ಕಾರದವರನ್ನು ನೀವು ಮಾಡಿರುವುದು ತಪ್ಪು, ಅನ್ಯಾಯ ಎಂದು ಹೇಳಿದರೆ ನಾವು ಮಾಡಿರುವುದು ಸರಿ ಎಂದು ಸರ್ಕಾರದವರು ಹೇಳಿದರೆ ಹೇಗೆ ? ಒಬ್ಬ ಪೋಲೀಸ್ ಇನ್‌ಸ್ಪೆಕ್ಟರು ಅನ್ಯಾಯ ಮಾಡಿದ್ದಾರೆ ಅವರನ್ನು ಕೆಲಸದಿಂದ ತೆಗೆಯಬೇಕು ಎಂದರೆ ಅವರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಳ್ಳದೆ ಅವರು ಏನೂ ಅನ್ಯಾಯ ಮಾಡಿಲ್ಲ ಎಂದು ಸರ್ಕಾರದವರು ಹೇಳಿದರು. ಆ ಪ್ಯಾರಾವನ್ನು ನಾನು ಇಲ್ಲಿ

ಓದುವುದಕ್ಕೆ ಇಷ್ಟಪಡುವುದಿಲ್ಲ. ಇಂಥಾ ಅನ್ಯಾಯಗಳನ್ನು ನೂರಾರು ಮಾಡಿದ್ದಾರೆ. ಯಾವ ಸೀನಿಯಾರಿಟಿಯನ್ನೂ ಕೇಳುವುದಿಲ್ಲ, ಯಾವ ಮೆರಿಟ್ ಅನ್ನೂ ಕೇಳುವುದಿಲ್ಲ. ಇವರಿಗೆ ಸಂಬಂಧೀಕರು ಅಥವಾ ಯಾರೋ ತಮಗೆ ಬೇಕಾದವರು ಇದ್ದರೆ ಅವರನ್ನು ಕೆಲಸಕ್ಕೆ ನೇಮಕ ಮಾಡಿದ್ದಾರೆ. ಅದರಲ್ಲೂ ಶ್ರೀಮಾನ್ ನಾಡಗೌಡರ ಪೋರ್ಟ್‌ಫೋಲಿಯೋ ತೆಗೆದುಕೊಂಡರೆ ಅಸಿಸ್ಟೆಂಟ್ ರಿಜಿಸ್ಟ್ರಾರರ ನೇಮಕಗಳನ್ನು ಮಾಡಿದ್ದಾರೆ.

ಶ್ರೀ ವೀರೇಂದ್ರ ಪಾಟೀಲ್.—ಆಗ ಇವರು ಇರಲಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಇತ್ತೀಚೆಗೆ ಕೆಲವು ಮಾಡಿದ್ದಾರೆ. 1966-67ನೇ ಇನಏಯಲ್ಲಿ 13 ಜನ ಜಾಯಿಂಟ್ ಡೈರೆಕ್ಟರನ್ನು ನೇಮಕ ಮಾಡಿದ್ದಾರೆ. ಡೆಪ್ಯುಟಿ ಡೈರೆಕ್ಟರನ್ನು ನೇಮಕ ಮಾಡಿದ್ದಾರೆ. ಇದಕ್ಕೆಲ್ಲಾ ಪಬ್ಲಿಕ್ ಸರ್ವೀಸ್ ಕಮಿಷನ್ನಿನವರನ್ನು ಲೆಕ್ಕದಲ್ಲೇ ಇಟ್ಟುಕೊಂಡಿಲ್ಲ. ಅನೇಕ ಸಾರಿ ಪಬ್ಲಿಕ್ ಸರ್ವೀಸ್ ಕಮಿಷನ್ನಿನವರನ್ನು ಕನ್‌ಸರ್ಟ್ ಮಾಡಿಲ್ಲ. ಅನೇಕ ವಿಷಯಗಳನ್ನು ಪಬ್ಲಿಕ್ ಸರ್ವೀಸ್ ಕಮಿಷನ್ನಿನ ಗಮನಕ್ಕೆ ತೆಗೆದುಕೊಂಡು ಹೋಗಿಲ್ಲ. ಅವರನ್ನು ಲಕ್ಷ್ಯ ಮಾಡದೆ ಅನೇಕ ನೇಮಕಗಳನ್ನು ಮಾಡಿದ್ದಾರೆ. ಈ ರೀತಿಯಲ್ಲಿ ಮಾಡಿ ಒಂದು ದಾರುಣ ಪರಿಸ್ಥಿತಿಗೆ ತಂದಿಟ್ಟಿದ್ದಾರೆ ಇವೊತ್ತು ಬೆಳಿಗ್ಗೆ ಎರಡು ಗಂಟೆಗಳಕಾಲ ಲೋಕರ್ ಕ್ಯಾಂಡಿಡೇಟ್‌ಗಳ ವಿಷಯ ಚರ್ಚೆಯಾಗಿದೆ. ಅವರು ಬಹಳ ತೊಂದರೆಯಲ್ಲಿದ್ದಾರೆ. ಅದನ್ನು ನಾವು ಒಪ್ಪಿಕೊಳ್ಳಬೇಕಾಗಿದೆ. ಸರ್ಕಾರದವರು ರೆಕ್ರೂಟ್‌ಮೆಂಟ್ ರೂಲ್ಸ್ ಮಾಡಿ ಕ್ಯಾಂಡಿಡೇಟ್‌ಗಳನ್ನು ನೇಮಕ ಮಾಡಿ ಎಂದು ಪಬ್ಲಿಕ್ ಸರ್ವೀಸ್ ಕಮಿಷನ್ನಿನವರನ್ನು ಕೇಳಬೇಕಾಗಿತ್ತು. ಆದರೆ ಇವರು ಆ ರೀತಿ ಮಾಡಲಿಲ್ಲ. ರೂಲ್ಸ್ ಇಲ್ಲದೇ ಇದ್ದರೆ ಏನು ಬೇಕಾದರೂ ಮಾಡಬಹುದು. ರೂಲ್ಸ್ ಇದ್ದರೆ ಕಷ್ಟ. ರೂಲ್ಸ್ ಇಲ್ಲದೆ ಇದ್ದುದರಿಂದ ಸಾವಿರಾರು ಜನ ಲೋಕರ್ ಕ್ಯಾಂಡಿಡೇಟ್‌ಗಳನ್ನು ನೇಮಕ ಮಾಡಿ ಇವೊತ್ತು ಸಾವಿರಾರು ಜನ ವಿದಾ ವಂತರನ್ನು ನಿರುದ್ಯೋಗಿಗಳಾಗಿ ಮಾಡಿದ್ದಾರೆ. ಇವೊತ್ತು ಬಿ.ಇ. ಫಸ್ಟ್‌ಕ್ಲಾಸ್ ಬಂದವನಿಗೆ ನೌಕರಿ ಸಿಗುತ್ತಿಲ್ಲ. ಇದಕ್ಕೆ ಕಾರಣವೇನೆಂದರೆ 35 ಪರ್ಸೆಂಟ್ ಮಾರ್ಕ್ಸ್ ಬಂದ ಅನೇಕ ಜನಗಳನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದಾರೆ. ಮೆರಿಟ್‌ನಲ್ಲಿ ಪಾಸು ಮಾಡಿದಂತಹವರಿಗೆ ಇವೊತ್ತು ಕೆಲಸವಿಲ್ಲ. ಇದರಿಂದ ದೇಶದಲ್ಲಿ ಅಸಂತೋಷ ಹೆಚ್ಚಾಗಿದೆ. ಎರ್ನೆಲ್ಲ ನೋಡಿದರೂ ಅತೃಪ್ತಿ ಗುಂಟಾಗಿದೆ. ಈ ರೀತಿಯಲ್ಲಿ ಇವರು ಆಡಳಿತನ್ನು ನಡೆಸಿಕೊಂಡು ಬಂದಿದ್ದಾರೆ. ನಮ್ಮ ಮೈನೂರು ರಾಜ್ಯದ ಮೆರಿಟೆಡ್ ಸ್ಟೂಡೆಂಟ್ಸ್ 300 ಜನ ಅಮೆರಿಕಾ ಮತ್ತು ಇಂಗ್ಲೆಂಡಿನಲ್ಲಿ ಇದ್ದಾರೆ. ಅಲ್ಲಿ ಅವರು ಬಹಳ ಒಳ್ಳೆಯ ಹೆಸರು ತೆಗೆದುಕೊಂಡಿದ್ದಾರೆ. ಡಾ. ತಿಮ್ಮೇಗೌಡ ಎನ್ನುವವರು ಕೆಲವು ಕಾಲ ಮಾರ್ಕಾಸ್ ಆಸ್ಪತ್ರೆಯಲ್ಲಿ ಇದ್ದರು. ಅವರಿಗೆ ಒಳ್ಳೆಯ ಇಂಟರ್‌ನ್ಯಾಷನಲ್ ರೆಪ್ಯುಟೇಷನ್ ಇದೆ. ಕೆಲವು ವಿಚಾರದಲ್ಲಿ ಅಮೇರಿಕಾದವರು ಇವರನ್ನು ಕನ್‌ಸರ್ಟ್ ಮಾಡುತ್ತಿದ್ದಾರೆ. ಇಂಥಾ ವ್ಯಕ್ತಿ ಇಲ್ಲಿಗೆ ಬಂದಾಗ ಅವರಿಗೆ ಒಂದು ನೌಕರಿಯನ್ನು ಕೊಡುವುದಕ್ಕೆ ಇವರ ಕೈಯ್ಯಲ್ಲಿ ಆಗಿಲ್ಲ. ಇವರಿಗೆ ಸಲಾಮು ಹಾಕಿ, ಬೆಜ್ಜಿ ಹಿಟ್ಟಿ ಕೈಮುಗಿಯತಕ್ಕಂತಹ ಜನಗಳಿಗೆ ಇವರು ಅನುಕೂಲ ಮಾಡಿಕೊಡುತ್ತಾರೆ.

ಶ್ರೀ ವೈ. ರಾಮಕೃಷ್ಣ.—ಈಗ ತಾವು ಹೇಳಿದಿರಿ, ತಮಗೆ ಇಷ್ಟಬಂದವರನ್ನು ನೇಮಕ ಮಾಡಿದ್ದಾರೆ. ಎಂದು ಅಂಥಾ ಹೈ ಕ್ವಾಲಿಫಿಕೇಷನ್ ಇರುವವರು ಈ ಸಂಬಳಕ್ಕೆ ಬರುತ್ತಾರೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಅದಕ್ಕೆ ಮೈನೂರು ಪ್ರೇಕಮಿಷನ್ನಿನವರು ಏನು ಹೇಳಿದ್ದಾರೆ, ಮತ್ತು ಲಕ್ಷ್ಮಣಸ್ವಾಮಿ ಮೊದಲಯಾರ್ ಅವರು ಏನು ಹೇಳಿದ್ದಾರೆ ಎಂದರೆ, ಅವರಿಗೆ ಸರಿಯಾದ ಪೇ ಸ್ಕೇಲ್ ಕೊಟ್ಟು ಅವರು ಬೇರೆ ಪ್ರೈವೇಟಾಗಿ ಪ್ರಾಕ್ಟೀಸ್ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಕೊಡಬೇಕು ಎಂಬುದಾಗಿ. ಆಂಧ್ರದಲ್ಲಿ, ಕೇರಳದಲ್ಲಿ ಮತ್ತು ತಮಿಳು ನಾಡಿನಲ್ಲಿ ಇಂಥಾ ಒಂದು ಪದ್ಧತಿ ಇದೆಯೆಂದು ಗೊತ್ತಾಗಿದೆ. ಅವರಿಗೆ ಪ್ರೈವೇಟ್ ಪ್ರಾಕ್ಟೀಸ್ ಮಾಡುವುದಕ್ಕೆ ಇಷ್ಟು ಗಂಟೆಗಳು ಎಂದು ಗೊತ್ತು ಮಾಡಿದ್ದಾರೆ ಎಂದು ನಾನು ಕೇಳಿದ್ದೇನೆ. ಇದನ್ನು ಪ್ರೇಕಮಿಷನ್‌ನವರು ಒಪ್ಪಿದ್ದಾರೆ ಎಂದು ಗೊತ್ತಾಗಿದೆ. ಆದ್ದರಿಂದ ಸರ್ಕಾರಿ ಹುದ್ದೆಯಲ್ಲಿರತಕ್ಕಂಥ ಡಾಕ್ಟರುಗಳಿಗೆ ಔಟ್ ಆಫ್ ಆಫೀಸ್ ಅವರ್ಸ್‌ನಲ್ಲಿ ಪ್ರೈವೇಟ್ ಪ್ರಾಕ್ಟೀಸ್ ಮಾಡುವುದಕ್ಕೆ ಅಡ್ಡಿ ಮಾಡಬೇಡಿ; ಇದೇ ಮಾತನ್ನು ಪೇ-ಕಮಿಷನ್ ಅವರು ಸಹ ಹೇಳಿದ್ದಾರೆ.

ಶ್ರೀ ಬಿ. ಪಿ. ಗಂಗಾಧರ.—ಸರ್ಕಾರದವರು ಅನುಮತಿ ಕೊಡದಿದ್ದರೂ ಕೂಡ ಪ್ರೈವೇಟ್ ಪ್ರಾಕ್ಟೀಸ್ ಮಾಡುತ್ತಲೇ ಇದ್ದಾರೆ. ಒಂದು ಪಕ್ಷ ಸರ್ಕಾರದವರು ಅನುಮತಿ ಕೊಟ್ಟರೆ ಎಲ್ಲ ರೋಗಿಗಳನ್ನು ಕೂಡ ಮನಗೇ ಬನ್ನಿ ಎಂದು ಹೇಳುತ್ತಾರೆ.

Sri H. SIDDAVEERAPPA.—I agree with my hon. friend Sri Gangadhar. Therefore I say, if we have the courage let the medical services be nationalised.

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—ಮಾನ್ಯ ಸಿದ್ಧವೀರಪ್ಪನವರಿಗೆ ಗೊತ್ತಿದೆ ಇದು ಇಡೀ ದೇಶದ ಸಮಸ್ಯೆಯಾಗಿದೆ. ಬ್ರೇನ್ ಡ್ರೇನ್ ಆಗುತ್ತಿರುವುದನ್ನು ನಾವು ದಿನವೂ ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ಅನೇಕರು ಹೊರದೇಶಗಳಲ್ಲಿ ದಿಗ್ರಿ ತೆಗೆದುಕೊಂಡು ಬರುತ್ತಾರೆ ಅಂತಹವರನ್ನ ಸ್ಟೈಪೆಂಡ್ ಆಗಿ ಕೆಲಸಕ್ಕೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇನಿಷಿಯಲ್ ರಿಕ್ರೂಟ್‌ಮೆಂಟ್ ಜೊತೆಯಲ್ಲಿಯೇ ಅವರು ಕೆಲಸಕ್ಕೆ ಬರಬೇಕಾಗುತ್ತದೆ. ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರವೇ ಕೆಲಸಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಎಲ್ಲೋ ಕೆಲವು ಸಲ ಕಾಂಟ್ರಾಕ್ ಬೇಸಿಸ್ ಮೇಲೆ ತೆಗೆದುಕೊಳ್ಳುತ್ತೇವೆ. ನೋಬಲ್ ಪಾರಿತೋಷಕ ತೆಗೆದುಕೊಂಡಂತಹ ಹಿಂದೂ ಸ್ಥಾನದ ಒಬ್ಬ ದೊಡ್ಡ ಡಾಕ್ಟರ್ ಅವರು ನಮ್ಮ ದೇಶದಲ್ಲಿ ಸೇವೆ ಮಾಡಲು ಸಾಕಷ್ಟು ಅನುಕೂಲಗಳು ಸಿಗುವುದಿಲ್ಲವೆಂದುಕೊಂಡು ಅಮೆರಿಕಾಕ್ಕೆ ಹೋಗಿ ನೆಲೆಸಿದ್ದಾರೆ. ಅವರು ಯಾವ ದೇಶದಲ್ಲಿ ಕೆಲಸ ಮಾಡುತ್ತಿರುತ್ತಾರೋ ಅಲ್ಲಿ ಸಿಗತಕ್ಕಂಥ ಸಂಬಳ ಮತ್ತು ಸ್ಯ್ಯಾಂಡರ್ಡ್ ನಮ್ಮ ದೇಶದಲ್ಲಿಯೂ ಕೂಡ ಸಿಗುತ್ತದೆಂಬ ಧೃವಸೆಯಿಂದ ವಾಪಸ್ ನಮ್ಮ ದೇಶಕ್ಕೆ ಬರುತ್ತಾರೆ, ಇಲ್ಲಿ ಅಂತಹ ಒಂದು ಅನುಕೂಲಗಳು ಸಿಗದಿದ್ದಾಗ ವಾಪಸ್ ಅಲ್ಲಿಗೆ ಹೋಗುತ್ತಾರೆ. ಹೊರದೇಶದಲ್ಲಿ ಕೊಡುವಂತಹ ಸಂಬಳ ನಾರಿಗೆಗಳನ್ನು ನಾವು ಕೊಡುವುದಕ್ಕೆ ನಮಗೆ ಶಕ್ತಿ ಇದೆಯೇ ಎಂಬುದನ್ನು ನೋಡಬೇಕಾಗಿದೆ. ಇದು ನಮ್ಮ ರಾಜ್ಯಕ್ಕೇ ಸೀಮಿತವಾಗಿಲ್ಲ. ಇದು ಇಡೀ ದೇಶದ ಸಮಸ್ಯೆಯಾಗಿದೆ. ವ್ಯಕ್ತಿಯ ಆದಾಯದ ಮೇಲೆ ಒಂದು ಮಿತಿಯನ್ನು ಇಡಬೇಕೆಂಬ ಪ್ರಶ್ನೆ ಬಂದಾಗ, ಈ ರೀತಿ ಮಿತಿಯನ್ನು ತರುವುದರಿಂದ ಇಂಟಲಿಜೆಂಟ್ ಆದಂಥ ಜನರು ಎಲ್ಲಿಗೆ ದೇಶಕ್ಕೆ ಹೊರಟು ಹೋಗುತ್ತಾರೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ವಿಚಾರ ಮಾಡಬೇಕೆಂದು ಪ್ರಧಾನಮಂತ್ರಿಯವರು ಕೂಡ ಹೇಳಿದ್ದಾರೆ. ಇವತ್ತು ನಮ್ಮ ರಾಜ್ಯದಲ್ಲಿ ಹೊಸದಾಗಿ ಕೆಲಸಕ್ಕೆ ಸೇರಿದ ಡಾಕ್ಟರ್‌ಗಳಿಗೆ 500 ರೂಪಾಯಿಗಳ ಸಂಬಳ ಕೊಡುತ್ತೇವೆ. ಅದೇ ಅಮೆರಿಕಾದಲ್ಲಿ ತಿಂಗಳಿಗೆ 1200 ಡಾಲರ್‌ಗಳ ಸಂಬಳ ಸಿಗುತ್ತದೆ. ನಮಗೆ ಇಷ್ಟೊಂದು ಸಂಬಳ ಕೊಡುವುದಕ್ಕೆ ಶಕ್ತಿ ಇಲ್ಲ. ಹೊರಗಿನಿಂದ ಬಂದಂಥ ಬುದ್ಧಿವಂತ ಡಾಕ್ಟರ್‌ಗಳನ್ನು ಕೆಲಸಕ್ಕೆ ನೇಮಕ ಮಾಡಿಕೊಳ್ಳದೆ ಬಿಟ್ಟು ಬಿಡುತ್ತಿದ್ದೀರಿ ಎಂದು ಹೇಳುತ್ತೀರಿ, ಒಂದು ಪಕ್ಷ ಅಂತಹವರನ್ನು ಪ್ರೊಫೆಸರ್ ಆಗಿ ನೇಮಕ ಮಾಡಿಕೊಂಡರೆ ಇಲ್ಲಯೇ ಇದ್ದು ಕೆಲಸ ಮಾಡುತ್ತಿದ್ದ ಮತ್ತೊಬ್ಬರು ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ತಮಗೆ ಆ ಪೋಸ್ಟ್ ಸಿಗಬೇಕಾಗಿತ್ತು ಎಂಬ ಕಾರಣದಿಂದ ಕೋರ್ಟ್‌ಗೆ ಹೋಗುತ್ತಾರೆ. ಈ ತರಹದ ಪ್ರಶ್ನೆಗಳು ಇಲ್ಲಿ ಉದ್ಭವವಾಗುತ್ತವೆ. ಇದು ಇಡೀ ದೇಶದ ಪ್ರಶ್ನೆಯಾಗಿದೆ. ಇದೇ ಕಾರಣದಿಂದ ಅನೇಕ ಜನರು ಹೊರಗಿನಿಂದ ಬಂದು ಮತ್ತೆ ವಾಪಸ್ ಹೊರದೇಶಕ್ಕೆ ಹೋಗುತ್ತಿದ್ದಾರೆ. ಮತ್ತು ಅಲ್ಲಿ ಲಕ್ಷಗಟ್ಟಲೆ, ಕೋಟಿಗಟ್ಟಲೆ ಹಣವನ್ನು ನಂಪಾದನೆ ಮಾಡಿ ಆಸ್ತಿ ಮಾಡಿಕೊಳ್ಳುತ್ತಿದ್ದಾರೆ. ಹೊರಗಿನಿಂದ ಬಂದಂಥ ಡಾಕ್ಟರ್‌ಗಳಿಗೆಲ್ಲಾ ಅವರ ಅಂತಸ್ತಿಗೆ ತಕ್ಕ ಕೆಲಸ ಕೊಡಲು ನಮ್ಮ ಸರ್ಕಾರಕ್ಕೆ ಸಾಧ್ಯ ಇದೆಯೇ ಎಂಬುದನ್ನು ತಾವೇ ಯೋಚನೆ ಮಾಡಿ.

ಶ್ರೀ ಎಚ್. ಸಿದ್ಧವೀರಪ್ಪ.—ಒಂದು ಮಾತನ್ನು ನವಿನಯದಿಂದ ಹೇಳಬಯಸುತ್ತೇನೆ. ಹೊರಗಿನಿಂದ ಬಂದಂಥ ಡಾಕ್ಟರ್‌ಗಳು ಇಲ್ಲಿ ಸರಿಯಾದ ಕೆಲಸ ಸಿಗದೆ ವಾಪಸ್ ಹೋಗುತ್ತಿರುವುದು ಸಂಬಳ ಸಾಕಷ್ಟು ಇಲ್ಲ ಸಿಗದಿರುವುದು ಕಾರಣ ಎಂಬ ಮಾತನ್ನು ನಾನು ಅಷ್ಟಾಗಿ ಒಪ್ಪಿಕೊಳ್ಳಲು ಇಷ್ಟಪಡುವುದಿಲ್ಲ. ಅವರು ಕೇವಲ ದುಡ್ಡಿಗಾಗಿ ಅಂಟಿಕೊಂಡಿರುವುದಿಲ್ಲ. ಕೆಲವರು ಇರಬಹುದು ಆದರೆ ಹೆಚ್ಚಿನವರು ದುಡ್ಡು ಮುಖ್ಯವಲ್ಲ ನಮ್ಮ ದೇಶದ ಸೇವೆ ಮುಖ್ಯ ಎಂದುಕೊಂಡು ಇಲ್ಲಿಗೆ ಬರುತ್ತಾರೆ. ಸ್ಯ್ಯಾಭಿಮಾನ ತೊರೆದು ದೇಶ ಸೇವೆ ಮಾಡಬೇಕೆಂಬ ಉದ್ದೇಶದಿಂದ ಬರುತ್ತಾರೆ. ಅನೇಕರಿಗೆ ಗೊತ್ತಿರಬಹುದು, ಹೊರದೇಶಗಳಲ್ಲಿ ಲಂಚ್ ಸಮಯದಲ್ಲಿ 25 ಸಾವಿರ ರೂಪಾಯಿಗಳ ಸಂಬಳ ತೆಗೆದುಕೊಳ್ಳತಕ್ಕಂಥ ಡೀನ್, ದೊಡ್ಡ ದೊಡ್ಡ ಡಾಕ್ಟರ್‌ಗಳು, ನರ್ಸ್‌ಗಳು ಮತ್ತು ಆಯಾಗಳು ಒಂದಡೆ ಸೇರಿಕೊಂಡು ಊಟ ಮಾಡುತ್ತಾರೆ. ಅಲ್ಲಿಯ ಒಂದು ಸಮಾನತೆ ಮತ್ತು ಆ ಒಂದು ಅಟ್‌ಮಾಸ್‌ಫಿಯರ್ ನಮ್ಮಲ್ಲಿ ಇಲ್ಲ. ಹೊರಗಿನಿಂದ ಇಲ್ಲಿಗೆ ಬಂದಂಥ ಡಾಕ್ಟರ್‌ಗಳು ಇಲ್ಲ ಕೆಲಸಕ್ಕಾಗಿ ನಂಬಂಧಪಟ್ಟವರ ಹತ್ತಿರ ಹೋಗಿ ಸಲಾಮ್ ಹೊಡೆಯಬೇಕು. ಬೆಗ್ ಮಾಡಬೇಕು. ಇದ್ದು ಬಹಳ ಜನರಿಗೆ ಹಿಡಿಸುವುದಿಲ್ಲ. ಆದ್ದರಿಂದ ಅನೇಕರು ಎಲ್ಲಿ ಕೆಲಸ ಮಾಡಿದರೂ ಅನ್ನ ಸಿಗುತ್ತದೆ ಎಂದುಕೊಂಡು ವಾಪಸ್ ಬೇರೆ ದೇಶಗಳಿಗೆ ಹೊರಟು ಹೋಗುತ್ತಿದ್ದಾರೆ. ನಮ್ಮ ದೇಶದಲ್ಲಿ ಸೇವೆ ಮಾಡಬೇಕು ಹೆಸರು ಗಳಿಸಬೇಕು ಎಂಬ ಉದ್ದೇಶದಿಂದ ಬಂದವರಿಗೆ ಇಲ್ಲಿ ಸರಿಯಾದ ಉತ್ತೇಜನ ಇಲ್ಲ, ಕೆಲಸ ಸಿಕ್ಕಿದರೂ ಕೂಡ, ಬೇಕಾದಂಥ ಉಪಕರಣಗಳು ಇರುವುದಿಲ್ಲ, ಕತ್ತರಿ ಕೂಡ ಇರುವುದಿಲ್ಲ. ಇವತ್ತು ದೊಡ್ಡ ದೊಡ್ಡ ಜಾಗಗಳನ್ನು ತಮಗೆ ಬೇಕಾದವರಿಗೆ ಕೊಟ್ಟಿದ್ದೀರಿ. ಉದಾಹರಣೆಗೆ ಹೇಳುವುದಾದರೆ, ಪ್ರೊಫೆಸರ್ ಹುದ್ದೆಯನ್ನು ಪೋಸ್ಟ್ ಗ್ರಾಜ್ಯುಯೇಟ್ ಆದವರಿಗೆ ಕೊಡಬೇಕೆಂದು ನಿಯಮವಿದೆ. ಇವತ್ತು ಗ್ರಾಜ್ಯುಯೇಟ್ ಮತ್ತು ಪೋಸ್ಟ್ ಗ್ರಾಜ್ಯುಯೇಟ್ ದಿಗ್ರಿ ಕೋರ್ಸನ್ ಹೇಳಿಕೊಡಲು ಇಂಡಿಯಾ ದೇಶದಲ್ಲಿ ಅನೇಕ ಇನ್ಸ್‌ಟ್ಯೂಷನ್‌ಗಳು ಪ್ರಾರಂಭವಾಗಿವೆ.

ದರ್ಖಾಂಗದಲ್ಲರತಕ್ಕಂಥ ಒಂದು ಇನ್ಸ್ಟ್ರಕ್ಷನ್ ಅವರು 11 ತಿಂಗಳಿಗೆ ಪೋಸ್ಟ್ ಗ್ರ್ಯಾಜ್ಯುಯೇಟ್ ಡಿಗ್ರಿ ಕೊಡುತ್ತಾರೆ. ಇಂತಹವರನ್ನು ಕೂಡ ನಮ್ಮ ರಾಜ್ಯದಲ್ಲಿ ನೇಮಕ ಮಾಡಿಕೊಳ್ಳಲು ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ನ್ನೇ ಬದಲಾವಣೆ ಮಾಡಿದರು. ಇದರಿಂದ ಅಮೇರಿಕಾಕ್ಕೆ ಹೋಗಿ ಎರಡು ಮೂರು ಸಲ ಗೋತಾಹೊಡೆದು, 6-7 ವರ್ಷ ಓದಿ ಡಿಗ್ರಿ ತೆಗೆದು ಕೊಂಡಂತಹವರಿಗೆ ಕೆಲಸ ಸಿಗುವುದು ಕಷ್ಟವಾಗುತ್ತಿದೆ. ಇಂಡಿಯನ್ ಮೆಡಿಕಲ್ ಕೌನ್ಸಿಲ್ ನವರು ಪೋಸ್ಟ್ ಗ್ರ್ಯಾಜ್ಯುಯೆಟ್‌ಗೆ, ಯಾವ ಯಾವ ಕೋರ್ಸ್‌ಗಳನ್ನು ರೆಕಗ್‌ನೈಜ್ ಮಾಡಿದ್ದಾರೋ ಅದನ್ನು ತೆಗೆದುಕೊಂಡು ಪಾಸ್ ಮಾಡಿದವರಿಗೆ ಕೆಲಸ ಕೊಡಬೇಕೆಂದು ನಿಯಮ ಎದ್ದರೂ ಕೂಡ ನಮ್ಮ ಸರ್ಕಾರದವರು 11 ತಿಂಗಳು ಓದಿ ಡಿಗ್ರಿ ತೆಗೆದುಕೊಡಂತಹವರನ್ನು ಕೂಡ ಕೆಲಸಕ್ಕೆ ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ವೈ. ರಾಮಕೃಷ್ಣ.—ಆ ರೀತಿ ಏನೂ ಕೆಲಸಕ್ಕೆ ತೆಗೆದುಕೊಳ್ಳುತ್ತಿಲ್ಲ. ಹಿಂದಿನ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ನೇ ಇವತ್ತಿಗೂ ಕೂಡ ಜಾರಿಯಲ್ಲಿದೆ.

ಶ್ರೀ ವೀರೇಂದ್ರ ಪಾಟೀಲ್.—ಮೊದಲು ಪೋಸ್ಟ್ ಗ್ರ್ಯಾಜ್ಯುಯೆಟ್ ಕೋರ್ಸಸ್ ನಲುವಾಗಿ ಹೊರದೇಶಗಳಿಗೆ ಹೋಗಲು ಫಾರಿನ್ ಎಕ್ಸ್‌ಚೇಂಜ್ ಮತ್ತು ಪಿ—ಫಾರಮ್ಸ್ ಸಿಗುತ್ತಿರಲಿಲ್ಲ. ಈ ಬಗ್ಗೆ ಕೆಲವರು ರಾಜ್ಯಾಂಗದ ಪ್ರಕಾರ ಪ್ರಪಂಚದ ಯಾವುದೇ ಭಾಗದಲ್ಲಿ ವಿದ್ಯಾಭ್ಯಾಸ ಮಾಡಲು ಹಕ್ಕಿದೆ ಎಂಬುದಾಗಿ ಸುಪ್ರೀಂ ಕೋರ್ಟಿಗೆ ಹೋದರು. ಅಲ್ಲಿ ಅದು ಸ್ಟ್ರಾಂಡ್ ಆಯಿತು. ಹೊರಗಡೆ ಹೋಗಿ ಓದಬಹುದು ಎಂದು ಸುಪ್ರೀಂ ಕೋರ್ಟಿನವರು ತೀರ್ಮಾನ ಕೊಟ್ಟಮೇಲೆ ಅನೇಕ ಜನ ಫಾರಿನ್‌ಗೆ ಹೊಗುತ್ತಿದ್ದಾರೆ. ಈ ರೀತಿ ಹೊರದೇಶಗಳಿಗೆ ಹೋಗುವುದನ್ನು ತಪ್ಪಿಸಲು ನಮ್ಮ ದೇಶದಲ್ಲಿ ಕೂಡ ಪೋಸ್ಟ್ ಗ್ರ್ಯಾಜ್ಯುಯೇಟ್ ಕೋರ್ಸಸ್‌ನ್ನು ಪ್ರಾರಂಭ ಮಾಡಬೇಕೆಂದು ನಮ್ಮ ಕೇಂದ್ರಸರ್ಕಾರದವರು ತೀರ್ಮಾನ ಕೈಕೊಂಡು ಅದಂರಂತೆ ಪೋಸ್ಟ್ ಗ್ರ್ಯಾಜ್ಯುಯೇಟ್ ಕೋರ್ಸಸ್‌ನ್ನು ಪ್ರಾರಂಭ ಮಾಡಲು ಅನುಮತಿ ಕೊಡುತ್ತಿದ್ದಾರೆ. ಈಗ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ಏನು ರೆಕಗ್‌ನೈಸ್ ಮಾಡಿದ್ದಾರೋ ಅದನ್ನೇ ನಾವು ಅನುಸರಿಸುತ್ತಿದ್ದೇವೆ. ಇದನ್ನು ಬಿಟ್ಟು ಬೇರೆ ಕಡೆ ಡಿಗ್ರಿ ತೆದುಕೊಂಡಂತಹವರಿಗೆ ನಾವು ಕೆಲಸ ಕೊಡುತ್ತಿಲ್ಲ.

ಶ್ರೀ ಎಚ್. ಸಿದ್ಧವೀರಪ್ಪ.—ತಾವು ಇತ್ತೊಂದು ಸಲ ಈ ಬಗ್ಗೆ ಇರತಕ್ಕಂಥ ರೂಲ್ಸ್‌ಗಳನ್ನು ತರಿಸಿಕೊಂಡು ನೋಡಬೇಕು. ನಾನು ಸಹ ಇನ್ನೊಂದು ಸಲ ನೋಡುತ್ತೇನೆ. ಈಗ ಹೇಳಿದ್ದು ತಪ್ಪಿದ್ದರೆ ಅದನ್ನು ಒಪ್ಪಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಆಗಬಹುದು.

ಶ್ರೀ ಎಚ್. ಸಿದ್ಧವೀರಪ್ಪ.—1964ರಲ್ಲಿ ರೆಕ್ರೂಟ್‌ಮೆಂಟ್ ರೂಲ್ಸ್‌ನ್ನು ಮಾಡಿದರು. ನಂತರ ಅದನ್ನು 1967ರಲ್ಲಿ ಬದಲಾವಣೆ ಮಾಡಿದರು. ಅದರಲ್ಲಿ ಎಷ್ಟರಮಟ್ಟಿಗೆ ತಾರತಮ್ಯ ಇದೆ ಎಂದರೆ ಕೆಲವು ಪೋಸ್ಟ್‌ಗಳಿಗೆ ನೇಮಕ ಮಾಡಲು ಟೀಚಿಂಗ್ ಎಕ್ಸ್‌ಪೀರಿಯನ್ಸ್ 5 ವರ್ಷ ಇರಬೇಕೆಂದು ಮತ್ತೆ ಕೆಲವು ಪೋಸ್ಟ್‌ಗಳಿಗೆ 4 ವರ್ಷ ಇರಬೇಕೆಂದು ಅದೇ ರೀತಿ 3 ವರ್ಷ, ಎರಡುವರ್ಷ ಒಂದುವರ್ಷ, 6ತಿಂಗಳು ಇರಬೇಕೆಂದು ಮಾಡಿದ್ದಾರೆ. ಇದನ್ನು ಯಾವ ಒಂದು ಆಧಾರದಮೇಲೆ ಮಾಡಿದ್ದಾರೋ ನನಗೆ ಗೊತ್ತಿಲ್ಲ. ಮೊದಲು ಟೀಚಿಂಗ್ ಕೇಡರ್ ಮತ್ತು ಅಡ್ಮಿನಿಸ್ಟ್ರೇಟಿವ್ ಸರ್ವಿಸ್ ಕೇಡರ್ ಎಂಬುದಾಗಿ ಎರಡುರೀತಿ ಇತ್ತು. ಈಗ ಎರಡನ್ನು ಸೇರಿಸಿ ಒಂದೇ ಕೇಡರ್ ಮಾಡಿದ್ದಾರೆ. ಒಂದು ಸರಿಯಾದ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಇಲ್ಲ. ಆ ರೀತಿ ಇದ್ದಿದ್ದರೆ ದೇಶದಲ್ಲಿ ಇಂತಹ ಒಂದು ಪರಿಸ್ಥಿತಿ ಬರುತ್ತಿರಲಲ್ಲ. ಮೆಡಿಕಲ್‌ನಲ್ಲಿ ಏನು ಗೋಳಾಗಿದೆಯೋ ಅದೇಗೋಳು ಇಂಜಿನಿಯರಿಂಗ್‌ನಲ್ಲಿಯೂ ಕೂಡ ಆಗಿದೆ. ಎಲ್ಲೆ ನೋಡಿದರೂ ಕೂಡ ಅಸಂತೋಷ, ಅತೃಪ್ತಿ ಎಂಬುದು ತುಂಬಿತುಳುಕಾಡುತ್ತಿದೆ.

ಅನೇಕ ವಿಷಯಗಳನ್ನು ನನ್ನ ಅನೇಕ ಮಾನ್ಯ ಸ್ನೇಹಿತರು ಮಾತನಾಡುವವರಿದ್ದಾರೆ. ಕಾನ್‌ಸ್ಟಿಟ್ಯೂಷನಲ್ ಗ್ಯಾರಂಟಿ ಎಂದು ಇದೆಯಲ್ಲ ಅದನ್ನು ಏತಕ್ಕೋಸ್ಕರ ಮರೆತು ಬಿಟ್ಟಿದ್ದಾರೆ? ಅದನ್ನು ಗಮನದಲ್ಲಿಟ್ಟುಕೊಂಡಿದ್ದರೇ !

5-30 P.M.

ಮೊನ್ನೆ ತಾನೆ ಒಂದು ಗವರ್ನಮೆಂಟ್ ಆರ್ಡರ್ ಹೊರಡಿಸಿದ್ದಾರೆ. ಅವರ ಪ್ರಕಾರ ಜೂನಿಯರ್ ಅಸಿಸ್ಟೆಂಟ್ ಇಂಜಿನಿಯರ್ ಎನ್ನುವ ಹೊಸ ಹುದ್ದೆಯ ನಿರ್ಮಾಣ ಮಾಡಿದ್ದಾರೆ. ಇದು ಒಂದು ಹೊಸ ಕೇಡರ್. ಆ ಅಸಿಸ್ಟೆಂಟ್ ಇಂಜಿನಿಯರಿಗೆ ಮತ್ತು ಜೂನಿಯರ್ ಇಂಜಿನಿಯರಿಗೆ ಮಧ್ಯೆ ಒಂದು ಹುದ್ದೆ ಮಾಡಿ ಜೂನಿಯರ್ ಇಂಜಿನಿಯರ್‌ಗಳಿಗಿಂತ ಹೆಚ್ಚಿನ ಗ್ರೇಡ್ ಕೊಡಬೇಕೆಂದು ಮಾಡಿದ್ದಾರೆ. ಅಷ್ಟೇ ಅಲ್ಲ, ಈಗ ನಮ್ಮ ರಾಜ್ಯದಲ್ಲಿ 2,040 ಜನ ಜೂನಿಯರ್ ಇಂಜಿನಿಯರು

(ಶ್ರೀ ಎಚ್. ಸಿದ್ದವೀರಪ್ಪ)

ಗಳಿದ್ದಾರೆ. ಅದರಲ್ಲಿ ಹತ್ತು ವರ್ಷ ಕಾಲ ಯಾರು ಸರ್ವಿಸ್ ಮಾಡಿದ್ದಾರೆ ಅವರನ್ನು ಜೂನಿಯರ್ ಅಸಿಸ್ಟೆಂಟ್ ಇಂಜಿನಿಯರ್ ಆಗಿ ಮಾಡಬೇಕೆಂದು 5-6-70ರಲ್ಲಿ ಆರ್ಡರ್ ಹೊರಡಿಸಿದ್ದಾರೆ. ಅದರ ಪ್ರಕಾರ 680 ಹೊಸ ಹುದ್ದೆಗಳ ನಿರ್ಮಾಣವಾಗುತ್ತಿದೆ. ಇಂಥ ಘನವಾದ, ಮಹತ್ವವಾದ ಬದಲಾವಣೆಯನ್ನು ಮಾಡಬೇಕಾದ್ದು ನಿಮ್ಮ ಮನಸ್ಸಿನಲ್ಲಿದ್ದರೆ ಪಬ್ಲಿಕ್ ಸರ್ವಿಸ್ ಕಮಿಷನ್ ಅವರನ್ನು ಅದರ ಬಗ್ಗೆ ಕೇಳಿದ್ದೀರಾ? ಅವರ ಅಭಿಪ್ರಾಯವನ್ನು ತೆಗೆದುಕೊಂಡಿದ್ದೀರಾ! ಪ್ರಮೋಷನ್, ಸೀನಿಯಾರಿಟಿ, ಪನಿಷ್‌ಮೆಂಟ್, ಡಿಸಿಪ್ಲಿನರಿ ಆಕ್ಷನ್ ಎಲ್ಲದರಲ್ಲಿಯೂ ಪಬ್ಲಿಕ್ ಸರ್ವಿಸ್ ಕಮಿಷನ್ ಅಭಿಪ್ರಾಯ ಕೇಳಬೇಕು ಎಂದು ರಾಜ್ಯಾಂಗದಲ್ಲಿ ವಿಧಿ ನಿಯಮಗಳಿವೆ. ಅದರಂತೆ ಕೇಳಿದ್ದೀರಾ ಎನ್ನುವುದನ್ನು ನಮಗೆ ನೀವು ಸ್ಪಷ್ಟಪಡಿಸಬೇಕು. ಅದರ ಪ್ರಕಾರ ಏನಾಗುತ್ತದೆ ಎಂದರೆ ಷೆಡ್ಯೂರ್ಡ್ ಕ್ಯಾಸ್ಟ್ ಮತ್ತು ಷೆಡ್ಯೂರ್ಡ್ ಟ್ರೈಬ್ಸ್‌ಗೆ ಸೇರಿದವರು ಒಟ್ಟು 122 ಜನ ಜೂನಿಯರ್ ಇಂಜಿನಿಯರುಗಳಿದ್ದಾರೆ. ಅವರಲ್ಲಿ ಹತ್ತು ವರ್ಷ ಸರ್ವಿಸ್ ಆಗಿರುವವರು 8 ಜನ, ಒಂಬತ್ತು ವರ್ಷ ಸರ್ವಿಸ್ ಆಗಿರುವವರು 4 ಜನ, ಎಂಟು ವರ್ಷ ಸರ್ವಿಸ್ ಆಗಿರುವವರು 13 ಜನ, ಏಳು ವರ್ಷ ಸರ್ವಿಸ್ ಆಗಿರುವವರು 15 ಜನ, ಆರು ವರ್ಷ ಸರ್ವಿಸ್ ಆಗಿರುವವರು 8 ಜನರ ಐದು ವರ್ಷ ಸರ್ವಿಸ್ ಆಗಿರುವವರು 12 ಜನ, ನಾಲ್ಕು ವರ್ಷ ಸರ್ವಿಸ್ ಆಗಿರುವವರು 10 ಜನ, ಮೂರು ವರ್ಷ ಸರ್ವಿಸ್ ಆಗಿರುವವರು 3 ಜನ, ಎರಡು ವರ್ಷ ಸರ್ವಿಸ್ ಆಗಿರುವವರು 24 ಜನ, ಈ ರೀತಿ 122 ಜನರಿದ್ದಾರೆ. ಸರ್ಕಾರದವರು ಹೊರಡಿಸಿರುವ ಆರ್ಡರ್ ಪ್ರಕಾರ ಹತ್ತು ವರ್ಷ ಸರ್ವಿಸ್ ಆಗಿರುವ 680 ಜನರಲ್ಲಿ ಎಷ್ಟು ಜನರು ಪ್ರಮೋಷನ್‌ಗೆ ಎಲಿಜಿಬರ್ ಆಗುತ್ತಾರೆಂದರೆ, 8 ಜನ ಮಾತ್ರ ಎಲಿಜಿಬರ್ ಆಗುತ್ತಾರೆ, ಈ ನಿರ್ಭಾಗ್ಯ, ಹತಭಾಗ್ಯರಾದ ಷೆಡ್ಯೂರ್ಡ್ ಕ್ಯಾಸ್ಟ್ ಮತ್ತು ಷೆಡ್ಯೂರ್ಡ್ ಟ್ರೈಬ್ಸ್‌ಗೆ ಸೇರಿದವರು. ಇವರಿಗೆ ಪಬ್ಲಿಕ್ ಸರ್ವಿಸ್ ಕಮಿಷನವರು ಏನು ಮಾಡಬಲ್ಲರು, ನಿಮ್ಮ ರಾಜ್ಯಾಂಗ ಏನು ಮಾಡಬಲ್ಲದು! ಇಂಥ ಆರ್ಡರ್ ಮಾಡಿದ್ದಾರೆ. ಇದನ್ನು ಯಾರಾದರೂ ಕಣ್ಣು ಬಿಟ್ಟು ನೋಡಿದ್ದಾರೆಯೇ! ಗವರ್ನಮೆಂಟ್ ಆರ್ಡರ್ ಪ್ರಕಾರ ಹತ್ತು ವರ್ಷ ಸರ್ವಿಸ್ ಆಗಿರ್ಲಿದವರಿಗೆ ಪ್ರಮೋಷನ್ ಕೊಡಬಾರದು ಎಂದರೆ, 8 ಜನ ಏನಾ ಇನ್ನು ಯಾರಿಗೂ ಪ್ರಮೋಷನ್ ಸಿಕ್ಕುವ ಹಾಗೆ ಇಲ್ಲ. ಕಾನೂನು ಪ್ರಕಾರ ಅವರಿಗೆ 18 ಪರ್ಸೆಂಟ್ ರಿಸರ್ವೇಷನ್ ಇರಬೇಕು. 18 ಪರ್ಸೆಂಟ್ ಎಂದರೆ ಎಷ್ಟಾಗುತ್ತದೆ ಎನ್ನುವುದನ್ನು ರೆಕ್ಕ ಹಾಕಿ. ಇದನ್ನೆಲ್ಲ ನೋಡಿದರೆ ಇದು ರಾಮರಾಜ್ಯವೋ, ರಾವಣ ರಾಜ್ಯವೋ, ಅಥವಾ ಅನಾಯಕತ್ಯ ರಾಜ್ಯವೋ ಎನ್ನುವುದು ಅರ್ಥವಾಗುವುದಿಲ್ಲ. ''ಸಿಕ್ಕಿದವರಿಗೆ ಸೀರುಂಡೆ'' ಎನ್ನುವ ಗಾದೆಯಂತೆ ನಿಮ್ಮ ಕೈಯಲ್ಲಿ ಏನು ಬೇಕಾದರೂ ಆಗಬಹುದು ಎನ್ನುವ ಭಾವನೆ ಬರುತ್ತದೆ. ನಿಮಗೆ ಬೇಕು ಎಂದರೆ ಯಾರನ್ನಾದರೂ ಮೇಲಕ್ಕೆ ಎತ್ತಬಹುದು, ಏನು ಬೇಕಾದರೆ ಮಾಡಬಹುದು, ಮಾಡಿಯೇ ತೀರುತ್ತೀರಿ ಎನ್ನುವ ಅಭಿಪ್ರಾಯ ಕೆಲವರಲ್ಲಿ ಬಂದಿದೆ. ಈ ಆಜ್ಞೆಯಿಂದ ಕೆಲವರಿಗೆ ಅನಮಧಾನವಾಗಿದೆ. ಜಾತಿ ಜಾತಿಯಲ್ಲಿ ವ್ಯಾಜ್ಯ ಹಚ್ಚಿದ್ದೀರಿ. ಇಷ್ಟೇ ಅಲ್ಲದೆ ಇದೇನು, ಈ ರಾಜ್ಯದಲ್ಲಿ ನಾವು ಪ್ರಜೆಗಳಾಗಿ ಬಾಳುವುದಕ್ಕೆ ಹಕ್ಕಿಲ್ಲವೇ ಎನ್ನುವ ಭಾವನೆ ಬರುತ್ತದೆ. ನಾನು ಒಂದು ವಿಚಾರವನ್ನು ಕೇಳಿದ್ದೇನೆ ಅದು ನಿಜವಲ್ಲದಿದ್ದರೆ ಮಾನ್ಯ ಸಭಾ ನಾಯಕರು ನನ್ನ ಮುಂದೆ ಹೇಳಬೇಕು. ಈಗ ರೆಜಿಸ್ಲೇಟಿವ್ ಕೌನ್ಸಿಲ್ ಚುನಾವಣೆ ಬರುವುದಿದೆ. ಮೂರು ಉಪಚುನಾವಣೆಗಳಲ್ಲಿ ಏಟು ತಿಂದುದರಿಂದ ಏನಾದರೂ ಮಾಡಿ ಕಳೆದುಕೊಂಡಿರುವ ಸ್ಥಾನಗಳನ್ನು ಹಿಂದಕ್ಕೆ ಪಡೆಯಲೇಬೇಕು ಎನ್ನುವ ಘಟ್ಟಕ್ಕೆ ಬಂದಾಗ ಸ್ಥಾಗ್ನೇಟ್ ಆಗಿರುವವರಿಗೆ ಅನುಕೂಲ ಮಾಡಲು ಈ ಹುದ್ದೆಗಳನ್ನು ಕ್ರಿಯೇಟ್ ಮಾಡಿಕೊಟ್ಟರೆ, 'ನಾವು ನಿಮಗೆ ಪೋಟು ಕೊಡುತ್ತೇವೆ, ಇಲ್ಲದೆ ಇದ್ದರೆ ಇಲ್ಲ ಎಂದು ಕೆಲವರು ಹಟ ಹಿಡಿದರು. ರೆಜಿಸ್ಲೇಟಿವ್ ಕೌನ್ಸಿಲ್ ಚುನಾವಣೆ ಕಾಲದಲ್ಲಿ ಯಾರಿಗೋ ಬ್ರೇನ್‌ವೇವ್ ಬಂತು ಈ ರೀತಿ ಏಕೆ ಮಾಡಬಾರದು ಎಂದು. ಆ ಬ್ರೇನ್‌ವೇವ್ ಬಂದವರು ಬೆಂಗಳೂರು ಡಿಲ್ಲೆಯವರು. ಬೆಂಗಳೂರು ಡಿಲ್ಲೆಯಲ್ಲಿ ಬುದ್ಧಿವಂತರಿದ್ದಾರೆ. ಹಳ್ಳಿಯಲ್ಲಿ ಹುಟ್ಟಿರುವ ನಮ್ಮಂಥ ಜನಗಳಿಗೆ ಇದು ಅರ್ಥವಾಗುವುದಿಲ್ಲ, ಹೊಳೆಯುವುದಿಲ್ಲ. ಅವರು ಇದನ್ನು ಯಾವಾಗ ತಲೆಯೊಳಗೆ ಹಾಕಿದರೋ ಅದೇ ಸಮಯದಲ್ಲಿ ಇವರು ಯಾವ ರೀತಿ ಇದನ್ನೆಲ್ಲ ಮಾಡಿದರೋ ದೇವರೇ ಬಲ್ಲ.

† ಶ್ರೀ ವೀರೇಂದ್ರ ಪಾಟೀಲ್.—ಅಧ್ಯಕ್ಷರೇ, ಬಹುಶಃ ಇಷ್ಟು ಮಾತ್ರ ನಾನು ಒಪ್ಪಬಹುದು. ಮಾನ್ಯ ಸದಸ್ಯರು ಯಾವುದೇ ವಿಚಾರ ಹೇಳುವುದಕ್ಕೆ ಪ್ರಯತ್ನ ಮಾಡಿ ವಿವರಣೆ ಕೊಡುತ್ತಿದ್ದರೆ ಕೇಳುವವರು ಹೌದು, ಇದು ನೂರಕ್ಕೆ ನೂರರಷ್ಟು ಸತ್ಯವಿರಬಹುದು ಎನ್ನುವಷ್ಟು ಶಕ್ತಿಯಿಂದ ಹೇಳುತ್ತಾರೆ. ನಾನು ಅದನ್ನು ಒಪ್ಪುತ್ತೇನೆ, ಆ ಸಾಮರ್ಥ್ಯ ಅವರಲ್ಲಿದೆ. ಜೂನಿಯರ್ ಅಸಿಸ್ಟೆಂಟ್ ಇಂಜಿನಿಯರುಗಳ ಹುದ್ದೆ ನಿರ್ಮಾಣ ಮಾಡುವಾಗ ನಮಗೆ ಮುಂದೆ ಚುನಾವಣೆ ಬರುತ್ತದೆ, ಗ್ರಾಮ

ವೇಟ್ ಕಾರ್ಪಿಟ್ಯೂಯೆನ್ಸಿಯಂದ ಒಬ್ಬರನ್ನು ನಿಲ್ಲಿಸಬೇಕಾಗಿದೆ, ಅಲ್ಲಿಂದ ಜೂನಿಯರ್ ಅಸಿಸ್ಟೆಂಟ್ ಇಂಜಿನಿಯರ್ ಆಗಿರುವವರಿಂದ ಪೋಟು ಬೇಕಾಗುತ್ತದೆ ಎಂದು ಈ ಆರ್ಡರ್ ಮಾಡಲಲ್ಲ. ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಪೇ-ಕಮಿಷನ್ ನೇಮಕ ಮಾಡಿದೆವು. ಪ್ಯೆನೂರು ಜೂನಿಯರ್ ಇಂಜಿನಿಯರ್ಸ್ ಅಸೋಸಿಯೇಷನ್ ಎಂದು ರಾಜ್ಯದಲ್ಲಿದೆ. ಅವರು ಒಂದೇ ಸಮನೆ ರೆಪ್ರೆಸೆಂಟೇಷನ್ ಮಾಡುತ್ತಿದ್ದರು, ಮೆಮೊರಾಂಡಂ ಮೇಲೆ ಮೆಮೊರಾಂಡಂ ಕೊಡುತ್ತಿದ್ದರು. 10–14 ವರ್ಷಗಳಿಂದ ಜೂನಿಯರ್ ಇಂಜಿನಿಯರುಗಳಾಗಿ ದುಡಿಯುತ್ತಿದ್ದೇವೆ, ಪ್ರಮೋಷನ್‌ಗೆ ಸ್ಕೋಪ್ ಇಲ್ಲ ಏನಾದರೂ ಓಪನಿಂಗ್ ಕೊಡಬೇಕು ಎಂದು ಒಂದೇ ಸಮನೆ ಹೇಳುತ್ತಿದ್ದರು. ಆಗ ನಾನು ಪಬ್ಲಿಕ್ ವರ್ಕ್ಸ್ ಶಾಖೆಯ ಮಂತ್ರಿಯಾಗಿದ್ದೆ. ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಯಾವ ರೀತಿಯ ಅಸಮಧಾನವೂ ಇಲ್ಲವೆ ನೋಡಿಕೊಂಡು ಹೋಗಲು ಯಾವ ರೀತಿಯ ಓಪನಿಂಗ್ ಕೊಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ನೋಡುವುದಕ್ಕೆ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಒಬ್ಬ ಅಡ್ಡಿಷನಲ್ ಸರಾಗಿ ಉತ್ತರ ಪ್ರದೇಶದ ಒಬ್ಬ ರಿಟೈರ್ಡ್ ಎಮಿನೆಂಟ್ ಇಂಜಿನಿಯರ್ ಆದ ಶ್ರೀ ಮಿತ್ರ ಎಂಬುವವರನ್ನು ಹಾಕಿದ್ದು ಅವರು ಮೆಮೊರಾಂಡಂನಲ್ಲಿದ್ದ ವಿಚಾರಗಳನ್ನು ಮತ್ತು ಇತರ ವಿಚಾರಗಳನ್ನು ವಿಚಾರ ಮಾಡಿ ಪೇ-ಕಮಿಷನ್ನಿಗೆ ಅವರು ಸಿಫಾರಸು ಮಾಡಿದ ಪ್ರಕಾರ ಪೇ ಕಮಿಷನ್‌ನವರು ತಮ್ಮ ಶಿಫಾರಸಿನಲ್ಲಿ ಇವರ ಬಗ್ಗೆ ಹೇಳಿದ್ದಾರೆ. ಪೇ ಕಮಿಷನ್ನಿನವರು, ಮಾಡಿರುವ ಸಿಫಾರಸುಗಳಲ್ಲಿ ಇದೂ ಒಂದು. ಸ್ಪೆಷಲ್ ಪೋಸ್ಟ್‌ನ್ನು ಕ್ರಿಯೇಟ್ ಮಾಡಬೇಕೆಂದು ಪೇ ಕಮಿಷನ್ ಸಿಫಾರಸ್ ಮಾಡಿದೆ. ಪೇ ಕಮಿಷನ್ ಸಿಫಾರಸುಗಳನ್ನು ಒಪ್ಪಬೇಕೆಂದು ಇದೇ ಮನೆಯಲ್ಲಿ ಒಂದೇ ಸಮನೆ ಅನೇಕ ಮಾನ್ಯ ಸದಸ್ಯರು ಹೇಳಿದರು. ಪೇ ಕಮಿಷನ್ ಮಾಡಿರುವ ಸಿಫಾರಸು ಒಪ್ಪಬೇಕು ಎಂದು ಅನೇಕ ಮಾನ್ಯ ಸದಸ್ಯರು ಹೇಳಿರುವುದು ಹಿಂದಿನ ಪ್ರೊಸೀಡಿಂಗ್ಸ್ ತೆಗೆದು ನೋಡಿದರೆ ಗೊತ್ತಾಗುತ್ತದೆ. ನಾವು ಅದೇ ರೀತಿ ಪೇ ಕಮಿಷನ್ ಸಿಫಾರಸು ಮಾಡಿದ್ದ ಪ್ರಕಾರ ಇಷ್ಟು ಪೋಸ್ಟ್‌ನ ಕ್ರಿಯೇಟ್ ಮಾಡಿದ್ದೇವೆ. ಇನ್ನೂ ಪೋಸ್ಟ್‌ನ ಫಿಲಪ್ ಆಗಿಲ್ಲ. ಪೋಸ್ಟ್‌ನ ಯಾವ ರೀತಿಯಲ್ಲಿ ಫಿಲಪ್ ಮಾಡಬೇಕು ಎನ್ನುವುದಕ್ಕೆ ಪ್ರೊಸೀಜರ್ ಇದೆ. ಜೂನಿಯರ್ ಅಸಿಸ್ಟೆಂಟ್ ಇಂಜಿನಿಯರ್ ಹುದ್ದೆಗಳನ್ನು ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್‌ನಲ್ಲಿ ಸೇರಿಸಬೇಕು ಅದಕ್ಕೆ ರೂಲ್ಸ್ ಅಮೆಂಡ್ ಆಗಬೇಕು. ಅದರ ನಂತರ ರಿಕ್ರೂಟ್‌ಮೆಂಟ್ ಮಾಡಬೇಕೋ ಪ್ರಮೋಷನ್ ಕೊಡಬೇಕೋ ಎನ್ನುವುದು ಬರುತ್ತದೆ. ಪೇ ಕಮಿಷನ್ ಸಿಫಾರಸು ಪ್ರಕಾರ ಹುದ್ದೆಗಳನ್ನು ನಿರ್ಮಾಣ ಮಾಡಿದ್ದೇವೆ. ಅದರ ಹೊರತಾಗಿ ಮತ್ತೇನೂ ಮಾಡಿಲ್ಲ. ಇದಕ್ಕೆ ಶ್ರೀಮಾನ್ ಸಿದ್ಧವೀರಪ್ಪನವರು ಉಪ್ಪು ಖಾರ ಒಗ್ಗರಣೆ ಎಲ್ಲ ಸೇರಿಸಿ ಹೇಳುತ್ತಿದ್ದಾರೆ. ತಮಗೆ ಬೇಕಾದವರಿಗೆ ಯಾರಿಗೋ ಪ್ರಮೋಷನ್ ಕೊಡುವುದಕ್ಕೆ ಇವೆಲ್ಲ ನಾವು ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ನಾವು ಪೋಸ್ಟ್‌ನ ಕ್ರಿಯೇಟ್ ಮಾಡಿದ್ದೇವೆ. ಆದರೆ ಅದರ ಪ್ರಕಾರ ಇನ್ನೂ ಯಾರಿಗೂ ಪ್ರಮೋಷನ್ ಕೊಟ್ಟಿಲ್ಲ, ಇನ್ನೂ ಏನೂ ಆಗಿಲ್ಲ. ಇದಕ್ಕೆಲ್ಲ ಪ್ರೊಸೀಜರ್ ಇದೆ. ಪ್ರೊಸೀಜರ್ ಪ್ರಕಾರ ಮಾಡಲಾರದೆ ಹೋದರೆ ಯಾರಾದರೂ ಹೈಕೋರ್ಟಿಗೆ ಹೋಗಿ ಚಾಲೆಂಜ್ ಮಾಡಿದರೆ ಎಲ್ಲವನ್ನೂ ಮತ್ತೆ ಮಾಡಬೇಕಾದ ಪರಿಸ್ಥಿತಿ ಬರಬಹುದು. ಅದಕ್ಕೆ ನಾನು ಇಷ್ಟು ಮಾತ್ರ ಹೇಳುತ್ತೇನೆ. ಆ ಪೇಕಮಿಷನ್ನಿನವರ ನಲಹೆಯ ಮೇರೆಗೆ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಕಾರ್ಯಕ್ರಮದ ಪ್ರಕಾರ ಈ ಪೋಸ್ಟ್ ಕ್ರಿಯೇಟ್ ಮಾಡಿದ್ದೇವೆ. ಅಷ್ಟೇವಿನಾ ಇದರಲ್ಲಿ ನಮ್ಮ ಬಳಗದವರು ಯಾರೂ ಇಲ್ಲ.

ಶ್ರೀ ಟಿ. ಆರ್. ಶಾಮಣ್ಣ.—ಆ ಜೂನಿಯರ್ ಇಂಜಿನಿಯರುಗಳ ಅಸೋಸಿಯೇಷನ್ನಿನವರು ಪದೇ ಪದೇ ಎಜಿಟೇಟ್ ಮಾಡಿ ಒತ್ತಾಯಮಾಡುತ್ತಿದ್ದ ಕಾಲದಲ್ಲಿ ಸರ್ಕಾರದವರು ಆ ಆರ್ಡರನ್ನು ಮಾಡಲಲ್ಲವೇ? ಆ ವಿಚಾರ ಮಾನ್ಯ ಸದಸ್ಯರಿಗೆ ಗೊತ್ತಿದೆಯೇ?

ಶ್ರೀ ಎಚ್. ಸಿದ್ಧವೀರಪ್ಪ.—ಮಾನ್ಯ ಸದಸ್ಯರು ಸರ್ಕಾರದವರನ್ನು ಬಹಳ ಚೆನ್ನಾಗಿ ರಕ್ಷಣೆ ಮಾಡುತ್ತಿದ್ದಾರೆ. ಈ ವಿಚಾರ ಇಲ್ಲ ಇಷ್ಟು ಮುಖ್ಯವಾಗಿ ಏತಕ್ಕೆ ಬಂದಿತೆಂದರೆ ಆ 681 ಜನರು ಮುಂದೆ ಪ್ರಮೋಷನ್ ಇಲ್ಲದೆ ಸ್ಟಾಗ್ನೇಷನ್ ಆಗತಕ್ಕ ವಿಚಾರ ಬಂದುದರಿಂದ ಇದನ್ನು ಎತ್ತಬೇಕಾಗಿ ಬಂದಿತು. ಹೀಗಾದರೆ ಆ ಸೀನಿಯಾರಿಟಿಗೇನು ಬೆಲೆ ಇರುತ್ತದೆ ನನಗೂ ಗೊತ್ತು ಆ ಪೇಕಮಿಷನ್ನಿನವರು ರೆಕಮೆಂಡ್ ಮಾಡಿದ್ದಾರೆ ಎಂಬುದು. ಆದರೆ ಹಾಗೇ ಆ ಪೇ ಕಮಿಷನ್ನಿನವರು ಮಾಡಿರತಕ್ಕ ರೆಕಮೆಂಡೇಷನ್‌ಗಳು ಅನೇಕವಾಗಿವೆ. ಇದೊಂದನ್ನೇ ಅವರೇನೂ ಮಾಡಿಲ್ಲ. ನಾನು ಓದಿದ್ದೇನೆ ಅವರ ವರದಿಯನ್ನು ಅದೊಂದು ದೊಡ್ಡ ಗ್ರಂಥರಾಶಿ. ಅವರು ಮಾಡಿರತಕ್ಕ ನಲಹೆಗಳು ಎಷ್ಟೋ ಇದ್ದರೂ ಅವುಗಳನ್ನೆರ್ನಾ ಬಿಟ್ಟು ನಿಮ್ಮ ಕಣ್ಣು ಏಕೆ ಈ ಒಂದರ ಮೇಲೆ ಬಿತ್ತು ಎಂಬುದು ಆಶ್ಚರ್ಯವಾಗಿದೆ. ಅವರ ಆ ನೂರಾರು ರೆಕಮೆಂಡೇಷನ್‌ಗಳಲ್ಲಿ ಇದಕ್ಕೆ ಏಕೆ ಅಷ್ಟು ಹೆಚ್ಚಿನ ಪ್ರಾಶಸ್ತ್ಯ ಕೊಟ್ಟರು? ಇಂಥ ಸರ್ಕಾರದವರ ಹನ್ಷಕ್ಷೇಪದಿಂದಲೇ ಸರ್ವೀಸಿನಲ್ಲಿ ಎಲ್ಲ

(ಶ್ರೀ ಎಚ್. ಸಿದ್ದವೀರಪ್ಪ)

ನೋಡಿದರೂ ಆ ಡಿಸ್‌ಕಂಟೆಂಟ್‌ಮೆಂಟ್ ಎಂಬುದು ತುಂಬಿತುಳುಕುತ್ತಿದೆ. ಇನ್ನಾದರೂ ಇದನ್ನು ಖಂಡಿತ ನಿಲ್ಲಿಸಬೇಕು ಎಂದು ಹೇಳುತ್ತೇನೆ, ನಮ್ಮ ಮೈಸೂರು ರಾಜ್ಯದಲ್ಲಿ ಸುಮಾರು ಎರಡು ಲಕ್ಷ ನೌಕರರಿದ್ದಾರೆ. ಅವರಿಗೆ ಖಜಾನೆಯಿಂದ ಸುಮಾರು 75 ಕೋಟಿ ರೂಪಾಯಿಗಳನ್ನು ಅಂದರೆ ನಮ್ಮ ರಾಜ್ಯದ ವರಮಾನದಲ್ಲಿ ಶೇ. 45 ರಷ್ಟನ್ನು ನಾವು ನೌಕರರಿಗಾಗಿ ಖರ್ಚು ಮಾಡುತ್ತಿದ್ದೇವೆ. ಅಷ್ಟಾದರೂ ಯಾರೊಬ್ಬರಲ್ಲೂ ಆ ಸಂತೃಪ್ತಿ ಎಂಬುದೇ ಕಾಣುತ್ತಿಲ್ಲ. ಯಾರೊಬ್ಬರಲ್ಲೂ ಸಮಾಧಾನ ಕಾಣುತ್ತಿಲ್ಲ. ಕಾರಣ ಎಲ್ಲೆಲ್ಲೂ ಅನ್ಯಾಯ ತುಂಬಿತುಳುಕುತ್ತಿದೆ.

ಶ್ರೀ ವೀರೇಂದ್ರ ಪಾಟೀಲ್.—ಎಲ್ಲರನ್ನೂ ಒಂದೇ ಸಮನಾಗಿ ತೃಪ್ತಿ ಪಡಿಸುವಂಥ ಪೋಡಿ ಗುಳಿಗೆಗಳು ತಮ್ಮಲ್ಲಿ ಏನಾದರೂ ಇದ್ದರೆ ಅವನ್ನು ಸಜೆಸ್ಟ್ ಮಾಡಿ.

ಶ್ರೀ ಎಚ್. ಸಿದ್ದವೀರಪ್ಪ.—ಅದಕ್ಕೆ ನನ್ನ ಸಲಹೆಯಾದರೂ ಇಷ್ಟೆ: ಸರ್ಕಾರದವರು ತಮ್ಮ ಹಸ್ತಕ್ಷೇಪ ನಿಲ್ಲಿಸಬೇಕು ಮತ್ತು ಪಬ್ಲಿಕ್ ಸರ್ವೀಸ್ ಕಮಿಷನ್ನಿನ ಕೈಯನ್ನು ಬಲಪಡಿಸಬೇಕು. ಆದರೆ ಈ ಹುದ್ದೆಗಳನ್ನು ಭರ್ತಿಮಾಡುತ್ತಿರುವುದೆಲ್ಲಾ ಒಂದು ಸ್ಲಿಪ್‌ಷಾಡಾಗಿ ನಡೆಯುತ್ತಿದೆ. ಅದರಿಂದಲೇ ಎಲ್ಲಿನೋಡಲಿ ಅನ್ಯಾಯ, ನೆಪೊಟಿಸಂಗೆ ಅವಕಾಶವಾಗಿದೆ. ಇದನ್ನು ತಪ್ಪಿಸಬೇಕಾದರೆ ಈ ಅಧಿಕಾರವನ್ನು ಸಂಪೂರ್ಣವಾಗಿ ಆ ಪಿ. ಎಸ್. ಸಿ. ಗೆ ಬಿಟ್ಟುಕೊಡಿ ಎಂದು ಹೇಳುತ್ತಿದ್ದೇನೆ. ಈ ದಿವಸ ಈ ಕೆಲಸಗಳಿಗೆ ಅರ್ಜಿಹಾಕಿಕೊಂಡಿರತಕ್ಕ ಅಭ್ಯರ್ಥಿಗಳು ನಮ್ಮನ್ನು ನಮ್ಮ ಕೆಲಸವನ್ನು ಮಾಡುವುದಕ್ಕೇ ಬಿಡುವುದಿಲ್ಲ. ಅವರು ನಮ್ಮ ಹತ್ತಿರ ಬಂದು ಆ ಮಂತ್ರಿಗಳು ಆ ಮೆಂಬರಿಗೆ ಹೇಳಿದರು ಈ ಮಂತ್ರಿಗಳು ಈ ಮೆಂಬರಿಗೆ ಹೇಳಿದರು ಈ ಮಂತ್ರಿಗಳು ಈ ಮೆಂಬರಿಗೆ ಹೇಳಿದರು ಎಂದು ಹೇಳಿ ನಮ್ಮ ಬಗ್ಗೆ ಯಾವ ಪಿ. ಎಸ್. ಸಿ. ಮೆಂಬರಿಗಾದರೂ ಶಿಫಾರ್ಸು ಮಾಡಿ, ನಾವು ನಿಮ್ಮನ್ನು ಚುನಾವಣೆ ಮಾಡಿ ಕಳುಹಿಸಿಲ್ಲವೇ ಎಂದು ಕೇಳುತ್ತಿದ್ದಾರೆ.

ಶ್ರೀ ವೀರೇಂದ್ರ ಪಾಟೀಲ್.—ಹಾಗಾದರೆ ಮಾನ್ಯ ಸದಸ್ಯರೂ ಕೂಡ ಆ ಪಬ್ಲಿಕ್ ಸರ್ವೀಸ್ ಕಮಿಷನ್ನಿನ ಸದಸ್ಯರ ಹತ್ತಿರ ಹೋಗಿದ್ದರೆಂದು ಅರ್ಥವಾಗುತ್ತಿದೆ.

ಶ್ರೀ ಎಚ್. ಸಿದ್ದವೀರಪ್ಪ.—ನಾನು ಪರ್ಸನಲ್ಲಾಗಿ ಹೋಗಲಿಲ್ಲ., ಫೋನಿನಲ್ಲಿ ಇಂಥ ಒಬ್ಬ ಅಭ್ಯರ್ಥಿ ಇಂಥ ಹುದ್ದೆಗೆ ಅರ್ಜಿಹಾಕಿಕೊಂಡು ಇದ್ದಾನೆ. ಅವನಿಗೆ ನ್ಯಾಯ ಥೆರಕಿಸಿಕೊಡಿ ಎಂದು ಹೇಳಿದ್ದೇನೆ. ಅಷ್ಟನ್ನೂ ಮಾಡುವಿದ್ದರೆ ಅವರು ನಮ್ಮನ್ನು ಹಿಂದಕ್ಕೆ ಮುಂದಕ್ಕೆ ಬಿಡುವುದಿಲ್ಲ. ನುಮ್ಮನೆ ನಮ್ಮನ್ನು ಏಕೆ ಪಾಪಿಗಳನ್ನಾಗಿ ಮಾಡುತ್ತೀರಿ? ಈಗಲಾದರೂ ನಿಮ್ಮ ಈ ಅಧಿಕಾರವೇನಿದೆ ಅದನ್ನೆಲ್ಲಾ ಆ ಪಿ. ಎಸ್. ಸಿ. ಗೆ ಬಿಟ್ಟುಕೊಡಿ, ನಮ್ಮ ಹತ್ತಿರ ಬರತಕ್ಕ ಅಭ್ಯರ್ಥಿಗಳು ಹೇಳುತ್ತಾರೆ ಸ್ಪೇಟಿನಲ್ಲಿ ಫಸ್ಟ್ ಕ್ಲಾಸ್ ಮತ್ತು ಫಸ್ಟ್ ರ್ಯಾಂಕಿನಲ್ಲಿ ಬಂದಿದ್ದೂ ಅಂತಹ ಬಡವರಿಗೆ ಸರ್ಕಾರದಲ್ಲಿ ಕೆಲಸಗಳು ಸಿಕ್ಕುತ್ತಿಲ್ಲ ಎಂದು. ಅವರು ಗೋಗರೆಯುತ್ತಿದ್ದಾರೆ. ಹಾಗಿರುವಾಗ ಅಂಥ ಬಡವರಿಗೆ ಶಿಫಾರ್ಸು ಇಲ್ಲದಿದ್ದರೆ ಈ ಸರ್ಕಾರದಲ್ಲಿ ಯಾರು ಕೆಲಸವನ್ನು ಕೊಡುತ್ತಾರೆ? ಹೀಗೆಲ್ಲಾ ಹೇಳಿಕೊಂಡು ಆ ಜನರು ಬಂದು ನಮ್ಮನ್ನು ಸದಾ ಕಾಡುತ್ತಿದ್ದಾರೆ. ಅವರಿಂದ ನಮಗೆ ಆ ಕಾಟ ತಪ್ಪಿಸಿ ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಸರ್ಕಾರದವರು ಇಂಥ ವ್ಯವಹಾರಗಳಲ್ಲಿ ಅವರ ರೀತಿ ನೀತಿಗಳು ಹೇಗಿರಬೇಕು ಎಂಬುದಕ್ಕೆ ಅವರು ಒಂದು ನಿರ್ದಿಷ್ಟವಾದ ನಿಯಮವನ್ನು ಅಳವಡಿಸಿಕೊಳ್ಳಬೇಕು. ಆದರೆ ಈ ವಿಚಾರದಲ್ಲಿ ಆ ಪಿ. ಸ್. ಸಿ. ಸದಸ್ಯರಮೇಲೆ ನನ್ನ ಯಾವ ಆಕ್ಷೇಪಣೆಗಳೂ ಇಲ್ಲ. ಅವರು ತಮ್ಮ ಹೊಣೆಯೇನಿದೆ ಎಂಬುದನ್ನು ಅರಿತು ಅದಕ್ಕನುಸಾರವಾಗಿ ನಡೆದಿದ್ದಾರೆಂಬುದನ್ನು ಅವರ ವರದಿಯಿಂದ ನಾವು ಕಾಣಬಹುದಾಗಿದೆ. ಆದರೆ ಅವರು ಬರೆದಿರತಕ್ಕ ವರದಿಯ ಬಗ್ಗೆ ಸರ್ಕಾರದವರು ಕೊಟ್ಟಿರತಕ್ಕ ಎಕ್ಸ್‌ಪ್ಲನೇಷನ್ ಹೇಗಿದೆ ಎಂದರೆ ಕಾಗೆ ಗುಬ್ಬಿ ಕಥೆ ಇದ್ದಹಾಗಿದೆ. ಪಿ.ಎಸ್.ಸಿ. ಅವರು ಚೆನ್ನಾಗಿ ಸ್ವತಂತ್ರವಾಗಿ ಕೆಲಸಮಾಡುವುದಕ್ಕೆ ಅವರಿಗೆ ಅವಕಾಶ ಕೊಟ್ಟಿದ್ದರೆ ಈ ದಿವಸ ಹೈಕೋರ್ಟಿನಲ್ಲಿ ಅಷ್ಟೊಂದು ರಿಟ್ಸರ್ಜಿಗಳೇಕೆ ಇರಬೇಕಾಗಿತ್ತು? ಇನ್ನೂ ಆ ಹಳೇಕಾಲದ ಹೊಂಬೇಗೌಡರ ಸಿಸ್ಟಂನ್ನು ಈ ಅಭ್ಯರ್ಥಿಗಳ ಎಗ್ಸಾಮಿನೇಷನ್ ಬಗ್ಗೆ ಅನುಸರಿಸಲಾಗುತ್ತಿದೆ. ಅದನ್ನು ಬದಲಾಯಿಸಬೇಕು. ಪಿ. ಎಸ್. ಸಿ. ಅವರ ಅಧಿಕಾರವನ್ನು ಹೆಚ್ಚಿಸಿ ಅವರ ಕೈ ಬಲಪಡಿಸಬೇಕು ಎಂದು ಹೇಳುತ್ತೇನೆ. ಪಿ. ಎಸ್. ಸಿ. ಛೇರ್ಮನ್ನರನ್ನು ಕೇಳಿ ಅವರಿಗೆ ಈ ವಿಚಾರದಲ್ಲಿ ಏನು ಸೌಕರ್ಯಗಳು ಬೇಕೆಂದು ಕೇಳುತ್ತಾರೋ ಅವುಗಳನ್ನು ಸರ್ಕಾರದವರು ಒದಗಿಸಬೇಕು. ಹಾಗೆ ಮಾಡಿದರೆ ಆಗ ಈ ಅನ್ಯಾಯಗಳು ತಪ್ಪುತ್ತವೆಂದು ಹೇಳುತ್ತೇನೆ.

ಇನ್ನು ನಾನು ಆ ಪಿ. ಎಸ್. ಸಿ. ಸದಸ್ಯರಿಗೂ ಒಂದೆರಡು ಸಲಹೆಗಳನ್ನು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸಬೇಕೆಂದಿದ್ದೇನೆ. ಪಿ. ಎಸ್. ಸಿ. ಅವರು ಈಗ ಯಾವುದಾದರೂ ಹುದ್ದೆಗಳನ್ನು ಭರ್ತಿಮಾಡತಕ್ಕ ಕಾಲದಲ್ಲಿ ಅಡ್ವರ್‌ಟೈಜ್ ಮಾಡಿದ್ದ ಹುದ್ದೆಗಳ ಬಗ್ಗೆ ಕೆಲವರಿಗೆ ಮಾತ್ರ ಇಂಟರ್‌ವ್ಯೂಗೆ ಅವಕಾಶ ಕೊಟ್ಟು ಬಾಕಿಯವರಿಗೆ ಅವಕಾಶ ಕೊಡುತ್ತಿಲ್ಲ. ಅದು ಸರಿಯಾದ ಕ್ರಮವಲ್ಲ. ನಮ್ಮ ರಾಜ್ಯಾಂಗದ 16ನೇ ವಿಧಿಯಲ್ಲಿ ಇದರ ಬಗ್ಗೆ ಸವಿಸ್ತಾರವಾಗಿ ಹೇಳಿದೆ. ಇಂತಿಂಥ ಕಾರಣಗಳಿಗಾಗಿ ನಿನಗೆ ಇಂಟರ್‌ವ್ಯೂಗೆ ಅವಕಾಶ ಕೊಟ್ಟಿದೆ ಇಂತಿಂಥ ಕಾರಣಗಳಿಗಾಗಿ ನಿನಗೆ ಇಂಟರ್‌ವ್ಯೂ ಕೊಡುವುದಕ್ಕಾಗಲಲ್ಲ ಎಂದು ಎಲ್ಲ ಅರ್ಜಿದಾರರಿಗೂ ಇವರು ತಿಳಿಸಬೇಕಾದ್ದು ಅತ್ಯವಶ್ಯಕ.

ಇದಾದ ನಂತರ ಒಂದಾವರ್ತಿ ಇಂಟರ್‌ವ್ಯೂ ಆಯಿತು ಎಂದಮೇಲೆ ಫಲತಾಂಶವನ್ನು ಹೊರಗೆಡುವುದಕ್ಕೇಕೆ ಇವರು 3–4 ತಿಂಗಳು ತೆಗೆದುಕೊಳ್ಳುತ್ತಿದ್ದಾರೆ? ಅವರೇಕೆ ಇಲ್ಲಿಗೆ ಸುತ್ತುತ್ತಿರಬೇಕು? ಅವರಿಗೆ ತೊಂದರೆ ಎಷ್ಟಾಗುತ್ತದೆ! ಇದಕ್ಕೆ ಅವಕಾಶ ಕೊಡಬಾರದು.

ಇನ್ನು ಆ ಪಿ. ಎಸ್. ಸಿ. ಅವರು ಸರ್ಕಾರಕ್ಕೆ ಅವರ ವರದಿಯನ್ನು ಕಳುಹಿಸಿದಮೇಲೆ ಇಲ್ಲ ಸರ್ಕಾರದವರು ಮೃಥಾ ಅದನ್ನು ಏಕೆ ಕೊಳೆಹಾಕಿಕೊಂಡು ಕುಳಿತುಕೊಳ್ಳುತ್ತಿದ್ದಾರೆ? ಇವರ ಅಭಿಪ್ರಾಯ ಏನಿದೆ ಅದನ್ನು ಬರೆದು ಕಳುಹಿಸುವುದಕ್ಕೆ ಪರ್ಷಾನುಗಟ್ಟಲೆ ಆ ವರದಿ ಇಲ್ಲಿ ಕೊಳೆಯುತ್ತಿರಬೇಕೇ! ಏಕೆ ಹಾಗೆ ಇಟ್ಟುಕೊಳ್ಳುತ್ತಾರೆ?

ಈ ರೀತಿ ರೆಕಮೆಂಡೇಷನ್ ಆಗಿ ಬಂದದ್ದನ್ನು ಹಾಗೆಯೇ ಇಟ್ಟುಕೊಳ್ಳಬೇಕಾದರೆ ಏನು ಕಾರಣ? ಅದನ್ನು ಹಿಂದು ಮುಂದು ಮಾಡಬೇಕಾದರೆ ಅಥವಾ ಅದರಲ್ಲಿ ಇನ್ನೇನಾದರೂ ಬದಲಾವಣೆ ಮಾಡುವುದಕ್ಕೆ ಏನಾದರೂ ಮಾಡುತ್ತೀರಾ? ಆ ರೀತಿ ಮಾಡುವುದಾದರೆ ಅವರ ರೆಕಮೆಂಡೇಷನ್ನನ್ನು ಏತಕ್ಕೆ ಅಕ್ಸೆಪ್ಟ್ ಮಾಡಿದಿರಿ ಅಥವಾ ಈ ಒಂದು ಕಾರಣದಿಂದ ಇವರು ಮಾಡಿದ ರೆಕಮೆಂಡೇಷನ್ನನ್ನು ಅಕ್ಸೆಪ್ಟ್ ಮಾಡಿಲ್ಲ ಎಂದು ಏತಕ್ಕೆ ಹೇಳುವುದಿಲ್ಲ! ಈಗ ರೇಟೆಸ್ಟ್ ಆಗಿ ಬಂದಿರತಕ್ಕ ಕ್ಲಾಸ್ ಸೆಕೆಂಡ್ ತಾಸೀಲ್ದಾರ್ ಪೋಸ್ಟ್ ತೆಗೆದುಕೊಂಡರೆ ಅದನ್ನು 13–14 ತಿಂಗಳುಗಳಿಂದಲೂ ಹಾಗೆಯೆ ಇಟ್ಟುಕೊಂಡಿದ್ದೀರಿ. ಈ ರೀತಿ ಪಬ್ಲಿಕ್ ಸರ್ವಿಸ್ ಕಮಿಷನ್ನಿನಿಂದ ರೆಕಮೆಂಡೇಷನ್ ಆಗಿ ಬಂದ ಮೇಲೂ ಕೂಡ ಏತಕ್ಕೆ ಹಿಂದಕ್ಕೆ ಇಡುತ್ತಿದ್ದೀರಿ? ಪಬ್ಲಿಕ್ ಸರ್ವಿಸ್ ಕಮೀಷನ್ನಿನವರು ಅದನ್ನು ಯಾವಾಗ ಕಳುಹಿಸಿದರು? ನೀವು ಯಾವಾಗ ಅಕ್ಸೆಪ್ಟ್ ಮಾಡಿಕೊಂಡಿರಿ? ಪಬ್ಲಿಕ್ ಸರ್ವಿಸ್ ಕಮಿಷನ್ನಿನವರ ರೆಕಮೆಂಡೇಷನ್ ಹಿಂದಕ್ಕೆ ಬೀಳುತ್ತಾ ಇದೆ. ಈ ಒಂದು ಸಿಷ್ಟಮಾಟಿಕ್ ಆಗಿ ಇರುವಂಥ ಪ್ರೊಸಿಜರನ್ನು ಏತಕ್ಕೆ ಬಿಟ್ಟರಿ? ನಮ್ಮ ರಾಜ್ಯದಲ್ಲಿ ಆಗತಕ್ಕಂಥ ಅನ್ಯಾಯವನ್ನು ಪಬ್ಲಿಕ್‌ಸರ್ವಿಸ್ ಕಮೀಷನ್ನಿನವರು ಎತ್ತಿ ತೋರಿಸಿದ್ದಾರೆ. ಆದರೂ ಕೂಡ ನೀವು ಅದರ ಪೂರ್ಣ ಚಿತ್ರವನ್ನು ತೋರಿಸಿಲ್ಲ. ಪಬ್ಲಿಕ್ ಸರ್ವಿಸ್ ಕಮಿಷನ್ ರಿಪೋರ್ಟಿನಲ್ಲಿ ಅಲ್ಲ ಅಲ್ಲಿ ಒಂದು ಸ್ಯಾಂಪಲ್ ತೋರಿಸಿದ್ದೀರಿ. ಈಗ ನೀವು ತೋರಿಸಿರುವಷ್ಟೇ ಸಾಕು. ನಿಮ್ಮ ಆಡಳಿತದಲ್ಲಿ ಏನು ಅನ್ಯಾಯವಾಗುತ್ತಾ ಇದೆ, ಅದು ಮುಂದೆ ದೇಶಕ್ಕೆಲ್ಲಾ ಬರಲಿ ಎಂದು ಆ ಸಂಪ್ರದಾಯ ಹಾಕುತ್ತಿದ್ದೀರಿ. ನೀವು ಯಾರಿಗೆ ನೌಕರಿ ಕೊಟ್ಟರೂ, ನೀವು ಏನು ಮಾಡುವುದಕ್ಕೆ ಹೋಟರೂ ನಮ್ಮ ಕಡೆ 100 ಪರ್ಸೆಂಟು ಇರುತ್ತಾರೆ ಅನ್ನುವುದನ್ನು ಮರೆತು ಬಿಡಬೇಕು. 100ಕ್ಕೆ 99 ಭಾಗ ನಮ್ಮ ಎನಿಮಿಗಳು ಇದ್ದಾರೆ. ಈವೊತ್ತು ದೇಶದಲ್ಲಿ ನ್ಯಾಯವಾದ ಆಡಳಿತ ನಡೆಸಿದರೆ ದೇಶ ಉಳಿಯುತ್ತದೆ ಇಲ್ಲದೇ ಹೋದರೆ ಅದು ಏನಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ಇಷ್ಟು ಮಾತು, ಹೇಳಿ ರಿಪೋರ್ಟನ್ನು ನಲ್ಲಿಸಿರತಕ್ಕಂಥ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† Sri L. SRIKANTAIAH (Nanjangud).—I am asked to speak when the session is coming to a close at 6 O' clock. I do not know whether I have sufficient time to say on the important report of the Public Service Commission. I must cougratulate the Public Service Commission for having given us a report on the functioning of the Public Service Commission in the State. As my learned friend Sri H. Siddaveerappa rightly pointed out, it appears that this is the first report that is being discussed here.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಸಭೆಯಲ್ಲಿ ಮೊದಲು ಈ ವಿಷಯ ಪ್ರಾರಂಭವಾದಾಗ ಶ್ರೀಮಾನ್ ಸಿದ್ದವೀರಪ್ಪನವರು ಆಕ್ಷೇಪಣೆ ಮಾಡಿ, ಹಟ ಹಿಡಿದು, ಈ ವಿಷಯ ಯಾವುದರ ಮೇಲೆ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಚರ್ಚೆಯಾಗುತ್ತಾ ಇದೆಯೋ ಅದಕ್ಕೆ ಸಂಬಂಧಪಟ್ಟ ಮುಖ್ಯ ಮಂತ್ರಿಗಳು ಬಂದರೆ ಭಾಷಣ ಮಾಡುತ್ತೇನೆಂದು ಹೇಳಿ ಅದರಂತೆ ಸಭೆಯನ್ನು 20 ನಿಮಿಷ ಕಾಲ ಮುಂದುವರಿಸಿ ಅನಂತರ ಅವರು ಬಂದಮೇಲೆ ಭಾಷಣ ಪ್ರಾರಂಭ ಮಾಡಿದರು. ಅದರಂತೆ ಈಗಲೂ ಮುಖ್ಯ ಮಂತ್ರಿಗಳು ಇರಬೇಕು ಎಂದು ಹೇಳುತ್ತೇನೆ.

ಶ್ರೀ ಎಲ್. ಶ್ರೀಕಂಠಯ್ಯ.—ಅಧ್ಯಕ್ಷರೇ, ಮುಖ್ಯಮಂತ್ರಿಗಳು ಬರಲಿ ಎಂದು ಹೇಳಿಕಳುಹಿಸಿ ಬೇಕು.

ಥೇರ್ಮನ್.—ಮುಖ್ಯ ಮಂತ್ರಿಗಳು ಬರುತ್ತಾರೆ. ತಾವು ಭಾಷಣವನ್ನು ಮುಂದುವರಿಸ ಬಹುದು.

ಶ್ರೀ ಎಲ್. ಶ್ರೀಕಠಯ್ಯ.—ಸಂಬಂಧಪಟ್ಟ ಮಂತ್ರಿಗಳು, ಮುಖ್ಯ ಮಂತ್ರಿಗಳು ಯಾರೂ ಆ ಸ್ಥಾನದಲ್ಲಿಲ್ಲ. ಅವರ ಬೆಂಚೆರ್ಲಾ ಪೂರ್ತಿ ಖಾಲಿಯಾಗಿವೆ. ಮುಖ್ಯವಾದ ಭಾಷಣ ಮಾಡುವಾಗ ಹಾಜರು ಇಲ್ಲದೇ ಹೋದರೆ ಏನು ಪ್ರಯೋಜನ, ಆ ರೀತಿ ತಾರತಮ್ಯ ಮಾಡಬೇಡಿ. ಮುಖ್ಯ ಮಂತ್ರಿಗಳಿಗೆ ಹೇಳಿಕಳುಹಿಸಿ, ಅವರು ಬರುವವರೆಗೆ ಕಾಯುತ್ತೇವೆ.

ಶ್ರೀ ಎಚ್. ಎನ್. ನಂಜೇಗೌಡ.—ಸ್ವಾಮಿ, ಶ್ರೀಮಾನ್ ಸಿದ್ದವೀರಪ್ಪನವರು ಮಾತನಾಡ ತಕ್ಕಂಥ ವೇಳೆಯಲ್ಲ ಸಂಬಂಧಪಟ್ಟ ಸಚಿವರು ಇಲ್ಲ ಎಂದು ಹೇಳಿದಾಗ ಸಭೆಯನ್ನು ಅಡ್ಜರ್ನ್ ಮಾಡುವಂತೆ ಸೂಚನೆ ಕೊಟ್ಟು, 20 ನಿಮಿಷ ಅಡ್ಜರ್ನ್ ಮಾಡಿದ ನಂತರ ಮುಖ್ಯ ಮಂತ್ರಿಗಳು ಬಂದರು. ಅದೇ ಸಂಪ್ರದಾಯವನ್ನು ಅನುಸರಿಸಿ ಅಡ್ಜರ್ನ್ ಮಾಡಿ. ಹಿಂದಿದ್ದ ಅಧ್ಯಕ್ಷರು ಒಳ್ಳೆಯ ಸಂಪ್ರದಾಯವನ್ನು ಹಾಕಿಕೊಟ್ಟಿದ್ದಾರೆ. ಅದರಂತೆ ಮಾಡಿ.

ಥೇರ್ಮನ್.—ಮುಖ್ಯ ಮಂತ್ರಿಗಳು ಬರುವವರೆಗೆ ತಮ್ಮ ಭಾಷಣವನ್ನು ಮುಂದುವರಿಸಿ.

ಶ್ರೀ ಎಚ್. ಎನ್. ನಂಜೇಗೌಡ.—ಸ್ವಾಮಿ, ಈ ಸಭೆ ಸೋಮವಾರ ಅಡ್ಜರ್ನ್ ಮಾಡುವ ಬದಲಾಗಿ ಇನ್ನೂ ಒಂದು ದಿವಸ ಮಂಗಳವಾರದವರೆಗೆ ಮುಂದುವರಿಸಿದರೂ ಪರವಾಯಿಲ್ಲ. ಈಗ ಭಾಷಣ 9 ಗಂಟೆಯಾದರೂ ಮುಗಿಯುವುದಿಲ್ಲ, ಮಂತ್ರಿಗಳೂ ಇಲ್ಲ. ಆದುದರಿಂದ ಈವೊತ್ತಿನ ಕಾರ್ಯಕಲಾಪಗಳನ್ನು ಸೋಮವಾರ ಹಾಕಿಕೊಂಡು, ಸೋಮವಾರದ ಕಾರ್ಯಕಲಾಪಗಳನ್ನು ಮಂಗಳವಾರ ಇಟ್ಟುಕೊಳ್ಳಬಹುದೆಂದು ನಾನು ಸೂಚನೆ ಮಾಡುತ್ತೇನೆ.

ಶ್ರೀ ಪ್ಯೆ. ರಾಮಕೃಷ್ಣ.—ಈ ಭಾಷಣ ಪ್ರಾರಂಭವಾದಾಗಿನಿಂದ ನಾನು ಮುಖ್ಯ ಮಂತ್ರಿಗಳ ಖಾತೆ ವಿಷಯ ಒಂದೇ ಅಲ್ಲ, ನನ್ನ ಖಾತೆ, ಶ್ರೀಮಾನ್ ನಾಡಗೌಡರ ಖಾತೆ, ಎಲ್ಲದರ ಮೇಲೂ ಟಿಪ್ಪಣಿಯನ್ನು ಬರೆದುಕೊಳ್ಳುತ್ತೇನೆ. ಅದನ್ನು ಅವರಿಗೆ ತಿಳಿಸುತ್ತೇನೆ. ಆದುದರಿಂದ ತಮ್ಮ ಭಾಷಣವನ್ನು ಮುಂದುವರಿಸಬಹುದು.

ಶ್ರೀ ಎಚ್. ಎನ್. ನಂಜೇಗೌಡ.—ಸ್ವಾಮಿ, ಈಗ 6 ಗಂಟೆಯಾಯಿತು. ಈ ಸಭೆಯನ್ನು ಮುಂದಕ್ಕೆ ಹಾಕಿ. ಈ ಪಬ್ಲಿಕ್ ಸರ್ವೀಸ್ ಕಮಿಷನ್ನಿನ ವರದಿಯ ಚರ್ಚೆಯನ್ನು ಸೋಮವಾರ ತೆಗೆದುಕೊಳ್ಳೋಣ.

Mr. CHAIRMAN.—The Houses will now adjourn and meet on Monday at 9-00 A. M.

The House adjourned at Six of the Clock to meet again at Nine of the Clock on Monday, the 19th October 1970.

WD 15530—GPB—550—29-1-71